# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಡಿಸೆಂಬರ್ 08, 2020

ಸಂಪುಟ : 47 ಸಂಚಿಕೆ : 218 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com



**ಲಕ್ಷ ದೀಪೋತ್ಸವ**

ದಾವಣಗೆರೆ ಸಮೀಪದ ಕುಂದುವಾಡದಲ್ಲಿರುವ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಸೋಮವಾರ ಸಂಜೆ ಲಕ್ಷ ದೀಪೋತ್ಸವ ನಡೆಯಿತು.

# 2.10 ಲಕ್ಷ ಟನ್ ಭತ್ತ ಖರೀದಿ

### ಜನವರಿ ಅಂತ್ಯದವರೆಗೆ ನೋಂದಣಿಗೆ ಅವಕಾಶ

ಬೆಂಗಳೂರು, ಡಿ. 7 – 2.10 ಲಕ್ಷ ಮೆಟ್ರಿಕ್ ಟನ್ ಭತ್ತವನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ತಕ್ಷಣದಿಂದಲೇ ಭತ್ತ ಖರೀದಿ ಕಾರ್ಯ ಆರಂಭಿಸಿ, ಜನವರಿ ಅಂತ್ಯದವರೆಗೆ ನೋಂದಣಿಗೆ ಅವಕಾಶ ನೀಡಲು ನಿರ್ಧರಿಸಲಾಗಿದೆ.

ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ನೇತೃತ್ವದಲ್ಲಿ ನಡೆದ ಸಂಪುಟ ಉಪ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕೇಂದ್ರ ಸರ್ಕಾರ 1.10 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಗೆ ಅನುಮತಿ ನೀಡಿದೆ. ಇದಕ್ಕೆ ಹೆಚ್ಚುವರಿಯಾಗಿ 1 ಲಕ್ಷ ಮೆಟ್ರಿಕ್ ಟನ್ ಸೇರಿದಂತೆ ಒಟ್ಟು 2.10 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಗೆ ನಿರ್ಧರಿಸಲಾಗಿದೆ.

ವಿಧಾನಸೌಧದಲ್ಲಿ ನಡೆದ ಉಪ ಸಮಿತಿ ಸಭೆಯಲ್ಲಿ ಸಚಿವರಾದ ಮಾಧುಸ್ವಾಮಿ, ಬಿ.ಸಿ. ಪಾಟೀಲ್, ಎಸ್.ಟಿ.ಸೋಮಶೇಖರ್, ಪ್ರಭು ಚೌವಾಣ್, ಗೋಪಾಲಯ್ಯ ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಭಾಗವಹಿಸಿದ್ದರು.

ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಪ್ರತಿ ರೈತನಿಂದ ಗರಿಷ್ಠ 75 ಕ್ವಿಂಟಾಲ್ ಭತ್ತ ಖರೀದಿಸಲಾಗುವುದು. ಸಾಮಾನ್ಯ ಭತ್ತಕ್ಕೆ ಪ್ರಸಕ್ತ 1,868 ರೂ. ಹಾಗೂ ಎ ಗ್ರೇಡ್ ಭತ್ತಕ್ಕೆ 1,888 ರೂ.ಗಳ ಬೆಲೆ ನಿಗದಿ ಪಡಿಸಲಾಗಿದೆ.

ಇದೇ ವೇಳೆ, ಡಿ.15ರಿಂದ ರಾಗಿ ಮತ್ತು ಬಿಳಿಜೋಳ ಖರೀದಿಗೆ ನೋಂದಣಿ ಆರಂಭಿಸಲು ನಿರ್ಧರಿಸಲಾಗಿದೆ. ಪ್ರತಿ ಎಕರೆಗೆ (2ನೇ ಪುಟಕ್ಕೆ)

# 800 ಕಂದಾಯ ಗ್ರಾಮಗಳಿಗೆ ಅಂತಿಮ ಅಧಿಸೂಚನೆ

ಬೆಂಗಳೂರು, ಡಿ.7 - ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡುವ ಪ್ರಕ್ರಿಯೆ ರಾಜ್ಯದಲ್ಲಿ ನಿರಂತರವಾಗಿ ನಡೆಯುತ್ತಿದ್ದು, ಈಗಾಗಲೇ 800 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ವಿಧಾನಸಭೆಯಲ್ಲಿ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಕೆ.ಬಿ. ಅಶೋಕ್ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವ ಅಶೋಕ್, ಪ್ರತಿ ತಿಂಗಳು ಕಂದಾಯ ಗ್ರಾಮಗಳನ್ನು ಘೋಷಣೆ ಮಾಡಲಾಗುವುದು. ಬಾಕಿ ಉಳಿದಿರುವ ಪ್ರಸ್ತಾವನೆ ಕಳುಹಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡಲಾಗುವುದು ಎಂದರು.

ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಲು ನಿರಂತರವಾಗಿ ಅರ್ಜಿ ಸ್ವೀಕರಿಸಲಾಗುತ್ತಿದ್ದು ಈ ಬಗ್ಗೆ ವಿಶೇಷ ಗಮನ ಕೊಡಲಾಗಿದೆ. 1490 ಪ್ರಸ್ತಾವನೆಗಳು ಬಂದಿವೆ ಎಂದು ಹೇಳಿದರು. ಅರಣ್ಯ ಭೂಮಿಯನ್ನು ಕಂದಾಯ ಭೂಮಿಯಾಗಿ ಘೋಷಣೆ ಮಾಡಲು ಸಮಸ್ಯೆ ಇದೆ ಎಂದು ತಿಳಿಸಿದರು.

9.5 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವಿವಾದವಿದೆ. ಈ ಕುರಿತಂತೆ (2ನೇ ಪುಟಕ್ಕೆ)

# ಬಂದ್‌ಗೆ ರಾಜ್ಯ ರೈತರ ಬೆಂಬಲ

## ಕಾನೂನು ಸುವ್ಯವಸ್ಥೆ ಕಾಪಾಡಲು ಸರ್ಕಾರದಿಂದ ಗೃಹ ಇಲಾಖೆ ಸೂಚನೆ

ಬೆಂಗಳೂರು, ಡಿ.7 - ಕೇಂದ್ರ ಸರ್ಕಾರದ ಕೃಷಿ ನೀತಿ ವಿರೋಧಿಸಿ ಭಾರತ್ ಬಂದ್‌ಗೆ ರಾಜ್ಯದ ರೈತರು ನಾಳೆ ತಮ್ಮ ಬೆಂಬಲ ವ್ಯಕ್ತಪಡಿಸಿರುವುದಲ್ಲದೆ, ಇಡೀ ರಾಜ್ಯಾದ್ಯಂತ ರಸ್ತೆ ರೋಕೋ, ಮೆರವಣಿಗೆ ಹಾಗೂ ಸಮಾವೇಶಗಳನ್ನು ನಡೆಸಲಿದ್ದಾರೆ.

ರೈತರು ಕರೆ ನೀಡಿರುವ ಬಂದ್‌ಗೆ ರಾಜ್ಯ ಸರ್ಕಾರ ಕ್ಯಾರೆ ಎಂದಿಲ್ಲ. ಬಂದ್ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡಿ ಸಾರ್ವಜನಿಕರಿಗೆ ಯಾವುದೇ ರೀತಿ ತೊಂದರೆಯಾಗದಂತೆ ನೋಡಿಕೊಳ್ಳಲು ಗೃಹ ಇಲಾಖೆಗೆ ಸರ್ಕಾರ ಸೂಚಿಸಿದೆ.

ಸರ್ಕಾರದ ನಿಲುವನ್ನು ಖಂಡಿಸಿರುವ ರೈತರು, ಅನ್ನ ಕೊಡುವ ರೈತನ ಬೆಂಬಲಕ್ಕೆ ಸಾರ್ವಜನಿಕರು ನಿಲ್ಲುವಂತೆ ರೈತ ಸಂಘಟನೆಗಳು ಮನವಿ ಮಾಡಿಕೊಂಡಿವೆ.

ನಮ್ಮ ಹಕ್ಕಿಗಾಗಿ ರಾಜ್ಯಾದ್ಯಂತ ಶಾಂತಿಯುತ ಹೋರಾಟ ನಡೆಸುತ್ತೇವೆ. ಯಾರಿಗೂ ತೊಂದರೆ ಕೊಡುವುದಿಲ್ಲ. ಇದನ್ನು ಸಹಿಸದವರು, ಕಾನೂನು ಸುವ್ಯವಸ್ಥೆ ಹಾಳು ಮಾಡಿದರೆ ಅದಕ್ಕೆ ನಾವು ಜವಾಬ್ದಾರರಲ್ಲ ಎಂದಿದ್ದಾರೆ.

ನಮ್ಮ ಹೋರಾಟಕ್ಕೆ ಉದ್ದಿಮೆದಾರರು, (2ನೇ ಪುಟಕ್ಕೆ)

## ಕೆಲ ರೈತ ಸಂಘಟನೆಗಳಿಂದ ನೂತನ ಕೃಷಿ ಕಾಯ್ದೆಗಳಿಗೆ ಬೆಂಬಲ

**ಸುಧಾರಣೆ ವಾಪಸ್ ಪಡೆಯುವುದಿಲ್ಲ ಎಂದು ಕೇಂದ್ರ ಸಚಿವರ ಭರವಸೆ**

ನವದೆಹಲಿ, ಡಿ. 7 – ನೂತನ ಕೃಷಿ ಕಾಯ್ದೆಗಳು ರೈತರಿಗೆ ಹಾಗೂ ಕೃಷಿ ವಲಯಕ್ಕೆ ಲಾಭ ತರುತ್ತವೆ. ಇವುಗಳನ್ನು ವಾಪಸ್ ಪಡೆಯಬಾರದೆಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕನ್ವಲ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ 20 ರೈತರ ಒಕ್ಕೂಟಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ.

ನಿಯೋಗವನ್ನು ಭೇಟಿ ಮಾಡಿರುವ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ಸರ್ಕಾರದ ಕ್ರಮಗಳು ರೈತರಿಗೆ ಲಾಭ ತರಲಿವೆ. ಸರ್ಕಾರ ಇಂತಹ ಪ್ರತಿಭಟನೆಗಳನ್ನು ನಿಭಾಯಿಸಲಿದೆ ಎಂದಿದ್ದಾರೆ.

ಕೃಷಿ ಉತ್ಪಾದಕರ ಒಕ್ಕೂಟಗಳ ಪ್ರತಿನಿಧಿಗಳು ಹಾಗೂ ಕೆಲ ರೈತರು ನಿಯೋಗದಲ್ಲಿದ್ದರು. ಭಾರತೀಯ ಕಿಸಾನ್ ಯೂನಿಯನ್ (2ನೇ ಪುಟಕ್ಕೆ)

# ಅಪ್ಪರ್ ಭದ್ರಾ ಯೋಜನೆಗೆ ಭದ್ರಾ ನೀರು ಬಳಕೆ

### ಭಾರತೀಯ ರೈತ ಒಕ್ಕೂಟದ ಆಕ್ಷೇಪ

ದಾವಣಗೆರೆ, ಡಿ.7- ಅಪ್ಪರ್ ಭದ್ರಾ ಯೋಜನೆಗೆ ಭದ್ರಾ ಜಲಾಶಯದ ನೀರು ಬಳಕೆಗೆ ಆಕ್ಷೇಪಿಸಿರುವ ಭಾರತೀಯ ರೈತ ಒಕ್ಕೂಟವು, ಹೀಗೆಯೇ ಮುಂದುವರೆದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ಸಹ ನೀಡಿದೆ.

ತುಂಗಾ ನದಿಯಿಂದ 17.50 ಟಿಎಂಸಿ ನೀರು ಎತ್ತಿ ಅಪ್ಪರ್ ಭದ್ರಾ ಯೋಜನೆಗೆ ನೀರು ಕೊಡಬೇಕು ಎಂಬ ನಿಯಮವಿದೆ. ಆದರೆ, ತುಂಗಾ ನದಿಯಿಂದ ನೀರು ಎತ್ತದೆ, ಭದ್ರಾ ಜಲಾಶಯದಲ್ಲಿನ ನೀರನ್ನು ಬಳಕೆ ಮಾಡಲಾಗುತ್ತಿದೆ ಎಂದು ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್.ಆರ್. ಲಿಂಗರಾಜ್ ಶಾಮನೂರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಅಪ್ಪರ್ ಲಿಫ್ಟಿಂಗ್ ಸ್ಕೀಂನಲ್ಲಿ ತುಂಗಾದಿಂದ 17.50 ಟಿಎಂಸಿ ನೀರು ಭದ್ರಾ ಜಲಾಶಯಕ್ಕೆ ಹಾಕಬೇಕು. ನಂತರ ಈ ನೀರನ್ನು ಮಾತ್ರ ಅಪ್ಪರ್ ಭದ್ರಾ ಯೋಜನೆಯಡಿ ಬಳಕೆ ಮಾಡಿಕೊಳ್ಳಬೇಕು ಎಂಬ ನಿಯಮವಿದೆ. ಆದರೆ, ಭದ್ರಾ ಜಲಾಶಯಕ್ಕೆ ಈ ಸ್ಕೀಂನಿಂದ ಒಂದು ಹನಿ ನೀರು ಸಹ ಹಾಕಿಲ್ಲ. ಈಗ ಭದ್ರಾ ಜಲಾಶಯದಲ್ಲಿದ್ದ ನೀರನ್ನು ಅಪ್ಪರ್ ಭದ್ರಾ ಯೋಜನೆಗೆ ಹರಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭದ್ರಾ ಜಲಾಶಯದ ನೀರಿನ ಮಟ್ಟ 186 ಅಡಿ ಇದ್ದಲ್ಲಿ 65.654 ಟಿಎಂಸಿ ನೀರು ಇರಬೇಕು. ಈಗ ಪ್ರಸ್ತುತ 54.154 ಟಿಎಂಸಿ ನೀರಿದೆ. ಸುಮಾರು 10 ಟಿಎಂಸಿ ನೀರು ಬಳಕೆ ಮಾಡಿಕೊಳ್ಳಲಾಗಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಈ ಬಾರಿ ಬೇಸಿಗೆ ಬೆಳೆಗೆ ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಇಲ್ಲದಂತಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಿರಿಯೂರಿಗೆ ಮಾರ್ಚ್‌ವರೆಗೆ ನೀರು ಕೊಂಡೊಯ್ದರೆ ಈ ಭಾಗದ ರೈತರಿಗೆ ಎಲ್ಲಿ ನೀರು ಉಳಿಯುತ್ತದೆ? ಎಂಬ ಪ್ರಶ್ನೆ ಎದುರಾಗಿದೆ. ಕಾಡಾ ಭದ್ರಾ, ಅಚ್ಚುಕಟ್ಟು ಪ್ರದೇಶದ (2ನೇ ಪುಟಕ್ಕೆ)

## ಬಂದ್‌ನಲ್ಲಿ ಬ್ಯಾಂಕ್ ಒಕ್ಕೂಟಗಳ ಭಾಗಿಯಿಲ್ಲ

ನವದೆಹಲಿ, ಡಿ. 7 – ಮಂಗಳವಾರ ರೈತ ಸಂಘಟನೆಗಳು ಕರೆ ನೀಡಿರುವ ಭಾರತ್ ಬಂದ್‌ನಲ್ಲಿ ಭಾಗಿಯಾಗುವುದಿಲ್ಲ ಎಂದು ಬ್ಯಾಂಕ್ ಒಕ್ಕೂಟಗಳು ತಿಳಿಸಿವೆ.

ಬ್ಯಾಂಕ್ ಒಕ್ಕೂಟ ರೈತರ ಪರವಾಗಿ ನಿಲ್ಲಲಿದೆ. ಆದರೆ, ಅವರು ಕರೆ ನೀಡಿರುವ ಭಾರತ್ ಬಂದ್‌ನಲ್ಲಿ ಭಾಗಿಯಾಗುವುದಿಲ್ಲ ಎಂದು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸೌಮ್ಯ ದತ್ತ ಹೇಳಿದ್ದಾರೆ.

ಅದೇ ರೀತಿ, ಬ್ಯಾಂಕುಗಳ ಒಕ್ಕೂಟ ಬಂದ್‌ನಲ್ಲಿ ಭಾಗಿಯಾಗುವುದಿಲ್ಲ. ಆದರೆ, ರೈತರ ಪ್ರತಿಭಟನೆಗೆ ಬೆಂಬಲಿಸಲಿದೆ. (2ನೇ ಪುಟಕ್ಕೆ)

## ಸತತ ಆರನೇ ದಿನ ಪೆಟ್ರೋಲ್ ಏರಿಕೆ

ನವದೆಹಲಿ, ಡಿ. 7 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಸತತ ಆರನೇ ದಿನ ಏರಿಕೆ ಕಂಡಿವೆ. ಸೋಮವಾರದಂದು ಪೆಟ್ರೋಲಿಯಂ ಉತ್ಪನ್ನಗಳ ದರ ಲೀಟರ್‌ಗೆ 26-30 ಪೈಸೆ ಹೆಚ್ಚಳ ಕಂಡಿವೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 30 ಪೈಸೆ ಹೆಚ್ಚಾಗಿದ್ದರೆ, ಡೀಸೆಲ್ ಬೆಲೆ 26 ಪೈಸೆ ಏರಿಕೆಯಾಗಿದೆ. ಪೆಟ್ರೋಲ್ ಬೆಲೆ ಈಗ 83.71 ರೂ. ಹಾಗೂ ಡೀಸೆಲ್ ಬೆಲೆ 73.87 ರೂ. ಆಗಿದೆ.

ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಏರಿಕೆಯಾಗುತ್ತಿರುವುದರಿಂದ ನವೆಂಬರ್ 20ರ ನಂತರ ಒಟ್ಟು 15 ಬಾರಿ ಪೆಟ್ರೋಲಿಯಂ (2ನೇ ಪುಟಕ್ಕೆ)

# ಪಹಣಿಗೆ ಖುಷ್ಕಿ ಕಾಲಂ ಗ್ರಹಣ

### ಅಧಿಕಾರಿಗಳು ತಪ್ಪಾಗಿ ನಮೂದಿಸುತ್ತಿರುವುದರಿಂದ ಸಾಲ ಸೌಲಭ್ಯಕ್ಕೆ ಕತ್ತರಿ

### ಸರ್ಕಾರಕ್ಕೆ ಸದನದಲ್ಲಿ ಪ್ರತಿಪಕ್ಷಗಳ ತರಾಟೆ


ಬೆಂಗಳೂರು, ಡಿ.7- ಸಾಫ್ಟ್‌ವೇರ್ ನಲ್ಲಿನ ದೋಷದಿಂದಾಗಿ ಪಹಣಿಯ ಬೆಳೆ ಕಾಲಂನಲ್ಲಿ ಖುಷ್ಕಿ ಎಂದು ಅಧಿಕಾರಿಗಳು ನಮೂದು ಮಾಡುತ್ತಿದ್ದು, ರೈತರಿಗೆ ಯಾವುದೇ ರೀತಿಯ ಸಾಲ ಸೌಲಭ್ಯ ಸಿಗುತ್ತಿಲ್ಲ ಎಂದು ಕಂದಾಯ ಸಚಿವ ಆರ್.ಅಶೋಕ್ ಅವರ ಮೇಲೆ ವಿಧಾನಸಭೆ ಸ್ಪೀಕರ್ ಸೇರಿದಂತೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರು ಮುಗಿ ಬಿದ್ದ ಘಟನೆ ವಿಧಾನಸಭೆಯಲ್ಲಿ ನಡೆಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಡಿ.ಪಿ. ರಾಜೇಗೌಡ ಆವರು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಲು ಕಂದಾಯ ಸಚಿವ ಅಶೋಕ್ ಮುಂದಾಗುತ್ತಿದ್ದಂತೆ ಸ್ಪೀಕರ್ ಕಾಗೇರಿ ಸೇರಿದಂತೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರು ಅಧಿಕಾರಿಗಳು ನೀಡಿದ ವರದಿಯನ್ನು ಸದನಕ್ಕೆ ಒಪ್ಪಿಸಬೇಡಿ ಎಂದು ಅಸಮಾಧಾನ ಹೊರ ಹಾಕಿದರು.

ಸಭಾಧ್ಯಕ್ಷರು ಕಳೆದ ಎರಡು ವರ್ಷ ಗಳಿಂದ ಸಾಫ್ಟ್‌ವೇರ್ ದೋಷದಿಂದಾಗಿ ಪಹಣಿಯ ಬೆಳೆ ಕಾಲಂನಲ್ಲಿ ಖುಷ್ಕಿ ಎಂದು ಅಧಿಕಾರಿಗಳು ನಮೂನೆ ಮಾಡುತ್ತಿದ್ದಾರೆ. ಇದರ ಪರಿಣಾಮ ಅಡಿಕೆ, ಏಲಕ್ಕಿ, ಬಾಳೆ ಸೇರಿದಂತೆ ವಿವಿಧ ಬೆಳೆಗಳಿಗೆ ಸಾಲ ಕೊಡುತ್ತಿಲ್ಲ. ನೀವು ಸಾಫ್ಟ್‌ವೇರ್ ಅನ್ನು ಖಾಸಗಿ ಏಜೆನ್ಸಿಗಳಿಗೆ ಕೊಟ್ಟಿರುತ್ತೀರಿ. ಅದನ್ನು ಕಾಲಮಿತಿಯೊಳಗೆ ಸರಿಪಡಿಸದಿದ್ದರೆ ನಿಮ್ಮ ಅಧಿಕಾರಿಗಳೇ ಸರ್ಕಾರದ ಮರ್ಯಾದೆ ಕಳೆಯುತ್ತಾರೆ ಎಂದರು.

ಮೊದಲು ಈ ಸಮಸ್ಯೆಯನ್ನು ಸರಿಪಡಿಸಿ. ಇದರಿಂದ ಗ್ರಾಮೀಣ ಭಾಗಗಳಲ್ಲಿ ರೈತರು ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. (2ನೇ ಪುಟಕ್ಕೆ)

# ಹಿಂದಿನ ಶತಮಾನದ ಕಾಯ್ದೆಗಳಿಂದ ಮುಂದಿನ ಶತಮಾನ ಕಟ್ಟಲಾಗದು



ಲಖ್ನೌ, ಡಿ. 7 - ಕೃಷಿ ಕಾಯ್ದೆಗಳಲ್ಲಿ ಪ್ರಮುಖ ಬದಲಾವಣೆ ವಿರೋಧಿಸಿ ರೈತರು ಬಂದ್‌ಗೆ ಕರೆ ನೀಡಿರುವ ಮಧ್ಯೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸುಧಾರಣಾ ಕಾಯ್ದೆಗಳನ್ನು ಸಮರ್ಥಿಸಿಕೊಂಡಿದ್ದಾರೆ.

ಆಗ್ರಾದ ಮೆಟ್ರೋ ರೈಲು ಯೋಜನೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿ ಮಾತನಾಡುತ್ತಿದ್ದ ಅವರು, ಬೆಳವಣಿಗೆಗೆ ಸುಧಾರಣೆಗಳು ಅಗತ್ಯ. ಹಳೆಯ ಶತಮಾನದ ಕಾಯ್ದೆಗಳು ಈಗ ಹೊರೆಯಾಗಿವೆ ಎಂದಿದ್ದಾರೆ.

ಹೊಸ ವ್ಯವಸ್ಥೆಗೆ ಸುಧಾರಣೆಗಳು ಅಗತ್ಯ. ಇದರಿಂದ ಹೊಸ ಸೌಲಭ್ಯಗಳು ಸಿಗುತ್ತವೆ. ಹಿಂದಿನ ಶತಮಾನದ ಕಾಯ್ದೆಗಳ ಆಧಾರದ ಮೇಲೆ ಹೊಸ ಶತಮಾನ ಕಟ್ಟಲು ಆಗುವುದಿಲ್ಲ ಎಂದು ತಿಳಿಸಿದ್ದಾರೆ.

ತಮ್ಮ ಸರ್ಕಾರ ಕೈಗೊಂಡ ಸುಧಾರಣೆಗಳು ಚುನಾವಣಾ ಫಲಿತಾಂಶದಲ್ಲೂ ಬಿಂಬಿತವಾಗಿವೆ ಎಂದಿರುವ ಪ್ರಧಾನಿ, ಸುಧಾರಣೆಗಳಿಗೆ ಜನರ ಬೆಂಬಲವಿದೆ ಎಂದು ಪರೋಕ್ಷವಾಗಿ ಹೇಳಿದ್ದಾರೆ.

ಕೆಲ ಕಾಯ್ದೆಗಳು ಕಳೆದ ಶತಮಾನಕ್ಕೆ ಉತ್ತಮವಾಗಿದ್ದವು. ಆದರೆ, ಅವುಗಳು ಈಗಿನ ಶತಮಾನಕ್ಕೆ ಹೊರೆಯಾಗಿವೆ. ಸುಧಾರಣೆಗಳು ನಿರಂತರ ಪ್ರಕ್ರಿಯೆ ಎಂದು ಮೋದಿ ಹೇಳಿದ್ದಾರೆ. (2ನೇ ಪುಟಕ್ಕೆ)

# ನಿರ್ವಹಣೆ ಕೊರತೆಯಲ್ಲಿ ಕುಂದುವಾಡ ಕೆರೆ

ದಾವಣಗೆರೆ, ಡಿ. 7 - ನಗರಕ್ಕೆ ಕುಡಿಯುವ ನೀರು ಪೂರೈಕೆಯ ಪ್ರಮುಖ ಕೇಂದ್ರವಾಗಿರುವ ಕುಂದುವಾಡ ಕೆರೆ ಸಮರ್ಪಕ ನಿರ್ವಹಣೆಯ ಕೊರತೆಯಿಂದ ಬಳಲುತ್ತಿದೆ.

ದಂಡೆಯ ಮೇಲೆ ಪೊದೆಗಳು ಬೆಳೆಯುತ್ತಿದ್ದರೆ, ಸಮಯ ಮೀರಿ ಬರುವವರನ್ನು ನಿಯಂತ್ರಿಸುವವರು ಇಲ್ಲದಂತಾಗಿದೆ. ಸಂಜೆ ನಂತರ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ವಾಯುವಿಹಾರಕ್ಕೆ ಬರುವವರಿಗೆ ಶೌಚಾಲಯದ ವ್ಯವಸ್ಥೆಯ ಕೊರತೆಯೂ ಕಾಡುತ್ತಿದೆ.

ಕೆರೆ ದಂಡೆಯ ಮೇಲೆ ಸಮೃದ್ಧವಾಗಿ ಹುಲ್ಲು ಹಾಗೂ ಪೊದೆಗಳು ಬೆಳೆದು ನಿಂತಿವೆ. ದಂಡೆಯ ಮೇಲೆ ಕೆಲವೆಡೆ ಪೊದೆಗಳು ಮರಗಳನ್ನು ನಾಚಿಸುವಂತೆ ಬೆಳೆಯುತ್ತಿವೆ. ಪೊದೆ ಕೆಲವೆಡೆ ಎಷ್ಟು ದಟ್ಟವಾಗಿವೆ ಎಂದರೆ ಕೆರೆಯನ್ನೇ ಮರೆ ಮಾಚುತ್ತಿದೆ.

ಪೊದೆಗಳಾಗಿರುವ ಗಿಡಗಳನ್ನು ಸವರಿ ಹಾಕದೇ ಹೋದರೆ ಅವುಗಳು ಇನ್ನಷ್ಟು ಬೆಳೆದು ದಂಡೆಯ ಕಲ್ಲುಗಳನ್ನೇ ಸಡಿಲ ಮಾಡುವ ಸಾಧ್ಯತೆಯೂ ಇದೆ. ಹೀಗಾಗಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಿದೆ.

ಕುಂದುವಾಡ ಕೆರೆ ಪ್ರವೇಶಕ್ಕೆ ಬೆಳಿಗ್ಗೆ ಹಾಗೂ ಸಂಜೆ ಸಮಯ ನಿಗದಿ ಪಡಿಸಲಾಗಿದೆ. ಆದರೆ, ಈ ಅವಧಿಯನ್ನು ಮೀರಿಯೂ ಜನರು ಕೆರೆಯಲ್ಲಿ ವಿಹಾರ ನಡೆಸುತ್ತಿದ್ದಾರೆ. ಕೇವಲ ಮೂರ್ನಾಲ್ಕು ಸಿಬ್ಬಂದಿಯನ್ನು ಕೆರೆಗೆ ನಿಯೋಜಿಸಲಾಗಿದೆ. ಜನರ ವಿಹಾರಕ್ಕೆ ಅವಕಾಶ ಇರುವ ಸುಮಾರು ಮೂರೂವರೆ ಕಿ.ಮೀ. ಉಸ್ತುವಾರಿ ಈ ಸಿಬ್ಬಂದಿ ಸಾಲದಂತಾಗಿದೆ.

ಸಂಜೆಯಾದ ನಂತರ ಅನೈತಿಕ ಚಟುವಟಿಕೆಗಳಿಗೆ ಕೆರೆ ಆಶ್ರಯವಾದಂತಾಗಿದೆ. ಕೆರೆ ದಂಡೆಯ ಬಳಿಯಲ್ಲಿ ಮದ್ಯ ಸೇವನೆಯೂ ನಡೆಯುತ್ತಿದೆ.

ಕೆರೆ ಸುಂದರವಾಗಿ ಕಾಣಲೆಂದು ಕಾರಂಜಿಗಳನ್ನು ಅಳವಡಿಸಲಾಗಿದೆ. ಆದರೆ, ಆ ಕಾರಂಜಿ ಸೂಕ್ತವಾಗಿ ಕೆಲಸ ಮಾಡುತ್ತಿಲ್ಲ. ಲಕ್ಷಗಟ್ಟಲೆ ಖರ್ಚು ಮಾಡಿಯೂ ಕಾರಂಜಿಯ ಪ್ರಯೋಜನಕ್ಕೆ ಬರುತ್ತಿಲ್ಲ.

ಕೆರೆ ಆವರಣದ ಒಳಗೆ, ಹೊರಗೆ ಪ್ರವೇಶದ ಬಳಿ ಮತ್ತು ಪ್ರವೇಶದ ಸಮೀಪ ಮೂರು ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ಸ್ಮಾರ್ಟ್ ಸಿಟಿಯ ಶೌಚಾಲಯವೂ ಸೇರಿದೆ. ಆದರೆ, ಮೂರೂ ಪ್ರಯೋಜನಕ್ಕೆ ಬಾರದ ಸ್ಥಿತಿಯಲ್ಲಿವೆ.

ಸುಂದರವಾದ ಕೆರೆ ನಿರ್ಮಾಣವಾಗಿದ್ದರೂ ನಿರ್ವಹಣೆಯ ಕೊರತೆ ಕಾಡುತ್ತಿದೆ. ಈ ಬಗ್ಗೆ ಪಾಲಿಕೆ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ.

1 ಕುಂದುವಾಡ ಕೆರೆ ದಂಡೆಯಲ್ಲಿ ಕೆರೆಯನ್ನೇ ಮರೆ ಮಾಚುವಂತೆ ಬೆಳೆದಿರುವ ಗಿಡ ಗಂಟಿಗಳು

2 ಆರಂಭಿಕ ದಿನಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸಿ, ಇತ್ತೀಚೆಗೆ ಸಮರ್ಪಕವಾಗಿ ಬಳಕೆಯಾಗದ ಕೆರೆಯಲ್ಲಿರುವ ಕಾರಂಜಿಗಳು

3 ಕೆರೆಯ ಹೊರ ಭಾಗದಲ್ಲಿರುವ ಮಹಾನಗರ ಪಾಲಿಕೆಯಿಂದ ನಿರ್ಮಿಸಲ್ಪಟ್ಟ ಶೌಚಾಲಯ

1



2



3



**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x50 ಪೂರ್ವ, 30x40 ಪಶ್ಚಿಮ, ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, 14 ಸಾವಿರ ಅಡಿ ದೇವರಬೆಳಕೆರೆ ರಸ್ತೆಯಲ್ಲಿ ಬಾಡಿಗೆಗೆ ಇದೆ. ಹೈಟೆಕ್ ಬಡಾವಣೆಯಲ್ಲಿ 30x50 ಪಶ್ಚಿಮ
ಶಾಮನೂರು ಧನ್ಯಕುಮಾರ್ ಮೊ. 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ ಮೊ. 97421 44715

**ಸೈಟ್‌ಗಳು ಮಾರಾಟಕ್ಕಿವೆ**
ನವೋದಯ ಸ್ಕೂಲ್ ಹತ್ತಿರ, ಮಹಾಲಕ್ಷ್ಮಿ ಲೇಔಟ್‌ನಲ್ಲಿ
30x50 South, 30x40 North, 30x50 East, 30x40 South, 30x40 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ ಇವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x56 ಪೂರ್ವ, 30x48 ಪೂರ್ವ. ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ, 20x30 ದಕ್ಷಿಣ. ವಿನಾಯಕ ಬಡಾವಣೆಯಲ್ಲಿ 30x36 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715
ಶಾಮನೂರು ನಾಗರಾಜ 98448 83303

**ಸೈಟ್‌ಗಳು ಮಾರಾಟಕ್ಕಿವೆ**
60x40 North, 60x40 West 60x40 East, 80x60 East
ವಿನಾಯಕ ಬಡಾವಣೆ, ಸಿದ್ದವೀರಪ್ಪ ಬಡಾವಣೆ, ಎಸ್. ಎಸ್. 'ಎ' ಬ್ಲಾಕ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 28×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, KHB ಕಾಲೋನಿ, 30×40 ಪೂರ್ವ ದಿಕ್ಕು ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ, ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಮನೆ ಬಾಡಿಗೆಗೆ ಇದೆ**
ಆಂಜನೇಯ ಬಡಾವಣೆಯ 4ನೇ ಕ್ರಾಸ್ 4ನೇ ಮುಖ್ಯ ರಸ್ತೆಯಲ್ಲಿರುವ (ಸವಿ ಡೈನ್ ಹೋಟೆಲ್ ಹತ್ತಿರ) ಸುಸಜ್ಜಿತವಾದ ಸೌಲಭ್ಯಯುತ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ:
99459 87659

**ಬೇಕಾಗಿದ್ದಾರೆ**
ಸ್ಟಾಕ್ ತೆಗೆಯಲು, ಬಿಲ್ಲಿಂಗ್ ಮಾಡಲು ಮತ್ತು ಸ್ಟಾಕ್ ಚೆಕ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ESI + PF ಸೌಲಭ್ಯವಿರುತ್ತದೆ.
ರಾಜಲಕ್ಷ್ಮಿ ಫಾರ್ಮಾ
7ನೇ ಮೇನ್, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.
96060 48402

**ಮನೆ ಬಾಡಿಗೆಗೆ ಇವೆ**
# 34,42, 5ನೇ ಕ್ರಾಸ್, 6ನೇ ಕ್ರಾಸ್ 'ಎ' ಬ್ಲಾಕ್, ದೇವರಾಜ ಅರಸ್ ಬಡಾವಣೆ, ಹೊಸ ಕೋರ್ಟ್ ಹಿಂಭಾಗ, ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ. 2ಬೆಡ್ ರೂಂ, ಎಕ್ಸ್‌ಟ್ರಾ 1 ರೂಂ ಇದೆ.
94492 46224
79751 22289

**Spece For Rent**
office/Bank/Show Room
Basement 1350 Sqft, 1st Floor 1460 Sqft, 2nd Floor 1460 Sqft, S.S. Layout 'B' Block, Ring Road, opposite D.C. House
96111 99018, 99162 47923

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ನಮ್ಮ ಶರಭೇಶ್ವರ ಊಟದ ಹೋಟೆಲ್‌ನ ಕ್ಯಾಷ್ ಕೌಂಟರ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನ ಇರುವ ಮಹಿಳೆಯರು ಬೇಕಾಗಿದ್ದಾರೆ. ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು.
ಬಸವರಾಜಯ್ಯ ಹಿರೇಮಠ
94489 80070, 78991 90070

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಬಡಾವಣೆ ಹಾಗೂ ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ 40x68 ಉತ್ತರಕ್ಕೆ ಸೈಟ್ ಮಾರಾಟಕ್ಕಿದೆ, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್ ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಲ್ಪೇರ್, ಏಜೆಂಟ್
ಮೊ.97315 12365

**ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆ ಸಿಬ್ಬಂದಿಗೆ ಅಡುಗೆ ಮಾಡಿ ಪಾತ್ರೆಯನ್ನು ಶುಚಿ ಮಾಡಿಟ್ಟು ಹೋಗಲು ಹೆಂಗಸರು (ಇಬ್ಬರು) ಬೇಕಾಗಿದ್ದಾರೆ. ನೇರ ಸಂದರ್ಶನಕ್ಕೆ ಕರೆ ಮಾಡಿ.
08192 252228
86186 42929

**ಬೇಕಾಗಿದ್ದಾರೆ**
Ice Creame Delivery ಕೊಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಸಜ್ಜನ್ ಸೂಪರ್ ಮಾರ್ಕೆಟ್, ದಾವಣಗೆರೆ.
99009 71888

**ಮನೆ ಬಾಡಿಗೆಗೆ ಇದೆ**
30x40 ಅಳತೆಯ ಡಬಲ್ ಬೆಡ್‌ರೂಂನ ನೆಲಮಹಡಿ ಮನೆ ಡಿಸಿಎಂ ಟೌನ್‌ಶಿಪ್ ಬಿ ಬ್ಲಾಕ್, ದಾವಣಗೆರೆ.
96326 75248, 89515 75248

**ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ಶಿವಕುಮಾರಸ್ವಾಮಿ ಬಡಾವಣೆ, ಮೋರ್ ಶಾಪ್ ಪಕ್ಕ (SBI) ಹತ್ತಿರ. ಹದಡಿ ರೋಡ್, ದಾವಣಗೆರೆ.
76191 23623, 94816 70519

**ಮನೆ ಬಾಡಿಗೆಗೆ ಇದೆ**
ನಂ. S 201, ವಿದ್ಯಾನಗರ ಕೊನೆ ಬಸ್‌ಸ್ಟಾಪ್, ಶ್ರೀ ಕಲ್ಲೇಶ್ವರ ಅಲೈಟ್ ಅಪಾರ್ಟ್‌ಮೆಂಟ್‌ನಲ್ಲಿ ಮೊದಲನೇ ಮಹಡಿಯಲ್ಲಿ ಎಲ್ಲಾ ಸೌಕರ್ಯವುಳ್ಳ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿರಿ :
ಕೆಂಚನಗೌಡ, 94480 32210

**ಗೋಡೌನ್ ಬಾಡಿಗೆಗೆ ಇದೆ**
ಸಂತೋಷ ವಿಡಿಯೋ ಕಾಂಪ್ಲೆಕ್ಸ್, ಬಂಬೂ ಬಜಾರ್, ದಾವಣಗೆರೆ.
97432 12009

**Building for Rent**
on Mama's Joint on 1st Floor Prime Location is on Rent.
Contact :
98440-65638

**ಬೇಕಾಗಿದ್ದಾರೆ**
ಸ್ವಂತ ದ್ವಿಚಕ್ರ ವಾಹನ ಉಳ್ಳ ಸೇಲ್ಸ್ ಬಾಯ್ ಅಥವಾ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ದಾವಣಗೆರೆ ಸಿಟಿ ಚೆನ್ನಾಗಿ ಗೊತ್ತಿರುವವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ :
96200 68555

**JOBS**
MCS ACADEMY
Training & Placement Cell
98444 92888

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಬೇಕಾಗಿದ್ದಾರೆ**
1) ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
ಪುರುಷರು ಹಾಗೂ ದ್ವಿಚಕ್ರ ವಾಹನವುಳ್ಳವರಿಗೆ ಆದ್ಯತೆ.
2) ಲ್ಯಾಬ್ ಟೆಕ್ನೀಷಿಯನ್
ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ:
ಮಿತ್ರ ಹೈ-ಟೆಕ್ ಡಯಾಗ್ನೋಸ್ಟಿಕ್ ಸೆಂಟರ್
ಚಿರಂತನ, 4ನೇ ಮೇನ್, 9ನೇ ಕ್ರಾಸ್, ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗ, ನಂದಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಮೊ: 78928 44849

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ- ದಾವಣಗೆರೆ
74112 50447

**ಬೇಕಾಗಿದ್ದಾರೆ**
ಟ್ಯಾಲಿ ಮತ್ತು ಕನ್ನಡ ಟೈಪಿಂಗ್ ಬಲ್ಲವರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಗ್ಗೆ 10.00 ರಿಂದ ಸಂಜೆ 5.30ರವರೆಗೆ
ವಿಳಾಸ: ಶ್ರೀ ಮಾರುತಿ ಚಿಟ್ ಫಂಡ್ಸ್
ತ್ರಿಶೂಲ್ ಟಾಕೀಸ್ ರೋಡ್, ಕೆ.ಬಿ. ಬಡಾವಣೆ, ದಾವಣಗೆರೆ.
77951 49297
99001 92123

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಜಮೀನು ಮಾರಾಟಕ್ಕಿದೆ**
ತೆಲಗಿ ಹತ್ತಿರ ಹರಪನಹಳ್ಳಿ ರಸ್ತೆಗೆ @ Rs 18 ಲಕ್ಷ ಎಕರೆಗೆ
74112 50447

**ಸೈಟ್ ಮಾರಾಟಕ್ಕಿದೆ**
ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, ಕುಂದವಾಡ, ದಾವಣಗೆರೆ.
East to West - 18.00 Mtrs
North to South - 12.00 Mtrs
Total 216.00 Sq Mtrs
ಆಸಕ್ತಿ ಉಳ್ಳವರು ಈ ನಂಬರ್‌ಗೆ ಸಂಪರ್ಕಿಸಿ:
094480 45681
080235 78507

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಭೂಮಿಕಾ ಮ್ಯಾಟ್ರಿಮನಿ**
ಲಿಂಗಾಯತ ವಧು-ವರರ ಕೇಂದ್ರ,
H.O : Vidya Nagara, 1st Bus Stop, Davangere.
B.O : BIET College Road, Near Hemavati Hostel
7760316576, 9008055813

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಶನ್ ವರ್ಕ್ಸ್, ಸೋಫ್ ಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಶನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ ಮಹಾರಾಜಪೇಟೆ, ದಾವಣಗೆರೆ.
98445 81966

# ಶಾಂತಿಯುತ ಗ್ರಾಮ ಪಂಚಾಯಿತಿ ಚುನಾವಣೆಗೆ ಜಗಳೂರು ತಾಲ್ಲೂಕು ಸಿದ್ಧತೆ



ಜಗಳೂರು, ಡಿ.7 - ಗ್ರಾಮ ಪಂಚಾಯಿತಿ ಚುನಾವಣೆಯನ್ನು ತಾಲ್ಲೂಕಿನಲ್ಲಿ ವ್ಯವಸ್ಥಿತ ಹಾಗೂ ಶಾಂತಿಯುತವಾಗಿ ನಡೆಸಲು ಸಕಲ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದ್ದು, ಚುನಾವಣೆ ಯಶಸ್ವಿಯಾಗಲು ಪ್ರತಿಯೊಬ್ಬರ ಸಹಕಾರ ಅತಿ ಮುಖ್ಯ ಎಂದು ಗ್ರಾಮ ಪಂಚಾಯಿತಿ ಚುನಾವಣೆಯ ತಾಲ್ಲೂಕು ನೋಡಲ್ ಅಧಿಕಾರಿ ಮತ್ತು ನಗರಾಭಿವೃದ್ದಿ ಕೋಶದ ಶ್ರೀಮತಿ ಪಿ.ಡಿ. ನಜ್ಮಾ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ 22 ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಯಲಿದೆ. 45 ಸೂಕ್ಷ್ಮ, 16 ಅತೀ ಸೂಕ್ಷ್ಮ , 158 ಸಾಮಾನ್ಯ ಮತಗಟ್ಟೆಗಳು ಸೇರಿದಂತೆ ಒಟ್ಟು 219 ಮತಗಟ್ಟೆಗಳನ್ನು ತೆರೆಯಲಾಗಿದೆ ಎಂದು ತಿಳಿಸಿದರು.

ಒಟ್ಟು 179 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ವ್ಯವಸ್ಥಿತವಾಗಿ ನಡೆಯಲು 8 ಸೆಕ್ಟರ್ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಪ್ರತಿಯೊಂದು ಮತಗಟ್ಟೆಗಳಿಗೆ ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಿಸಿದ್ದು ಈಗಾಗಲೇ ಅವರಿಗೆ ತರಬೇತಿಯನ್ನು ನೀಡಲಾಗಿದೆ

ನಾಮಪತ್ರ ಸಲ್ಲಿಸಲು ಇದೇ ದಿನಾಂಕ 11 ರಂದು ಕೊನೆಯ ದಿನವಾಗಿದ್ದು, ದಿನಾಂಕ 12ರಂದು ನಾಮಪತ್ರ ಪರೀಶಿಲನೆ, 14 ರಂದು ಉಮೇದುವಾರಿಕೆಯನ್ನು ಹಿಂಪಡೆಯಲು ಕೊನೆಯ ದಿನವಾಗಿದ್ದು, ದಿನಾಂಕ 22 ರಂದು ಮತದಾನ, 30 ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

ಕೋವಿಡ್ ಸೋಂಕಿತರಿಗೆ ಕೊನೆಯ 1 ಗಂಟೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ, ಮತಗಟ್ಟೆ ಕೇಂದ್ರಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಅವರು ವಿವರಿಸಿದರು.

ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಯಲು ಒಂದು ತಿಂಗಳು ಪೋಲಿಸ್ ಮತ್ತು ಅಬಕಾರಿ ಅಧಿಕಾರಿಗಳ ತಂಡ ಗಸ್ತು ತಿರುಗಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ನಾಗವೇಣಿ, ಇ.ಓ. ಮಲ್ಲನಾಯ್ಕ, ತಾಲ್ಲೂಕು ಆರೋಗ್ಯಾಧಿಕಾರಿ ಜಿ.ಓ.ನಾಗರಾಜ್, ಮತ್ತಿತರರು ಹಾಜರಿದ್ದರು.

## ಖುಷ್ಕಿ ಕಾಲಂ ಗ್ರಹಣ

(1ನೇ ಪುಟದಿಂದ) ಅಧಿಕಾರಿಗಳು ನೀಡುವ ವರದಿಯನ್ನು ಸದನದಲ್ಲಿ ಮಂಡಿಸಬೇಡಿ. ವಾಸ್ತವ ಏನಿದೆ ಎಂಬುದನ್ನು ತಿಳಿದುಕೊಳ್ಳಿ ಎಂದು ಸ್ಪೀಕರ್ ಸಲಹೆ ಮಾಡಿದರು.

ಇದಕ್ಕೆ ದನಿಗೂಡಿಸಿದ ಶಾಸಕರಾದ ಆರಗ ಜ್ಞಾನೇಂದ್ರ, ಅಶೋಕ್ ನಾಯಕ್, ರಾಜೇಗೌಡ, ಹೆಚ್.ಕೆ.ಕುಮಾರಸ್ವಾಮಿ, ಶಿವಲಿಂಗೇಗೌಡ ಸೇರಿದಂತೆ ಮತ್ತಿತರರು, ರೈತರು ಎದುರಿಸುತ್ತಿರುವ ಕಷ್ಟಗಳನ್ನು ಸದನದ ಗಮನಕ್ಕೆ ತಂದರು.

ನಾನು ಅನೇಕ ಕಡೆ ಭೇಟಿ ಕೊಟ್ಟಾಗ ಈ ಸಮಸ್ಯೆ ನನ್ನ ಗಮನಕ್ಕೂ ಬಂದಿದೆ. ಸಾಫ್ಟ್‌ವೇರ್‌ನಲ್ಲಿ ಎಲ್ಲೆಲ್ಲಿ ಈ ರೀತಿ ತೊಂದರೆಯಾಗಿದೆಯೋ ಅದನ್ನು ಸರಿಪಡಿಸಬೇಕೆಂದು ಈಗಾಗಲೇ ಸೂಚಿಸಿದ್ದೇನೆ. ಆದಷ್ಟು ಬೇಗ ಈ ಸಮಸ್ಯೆಯನ್ನು ಇತ್ಯರ್ಥಪಡಿಸುವುದಾಗಿ ಹೇಳಿದರು.

ಇದಕ್ಕೆ ಮತ್ತೆ ಕೆಂಡ ಕಾರಿದ ಸದಸ್ಯರು ನಿಮ್ಮ ಬಗ್ಗೆ ನಮಗೆ ಗೌರವವಿದೆ. ನೀವು ಅಧಿಕಾರಿಗಳಿಂದ ಮಾಹಿತಿ ಪಡೆದು ಉಂಟಾಗಿರುವ ಲೋಪ ಸರಿಪಡಿಸಿ. ಇಲ್ಲದಿದ್ದರೆ ರೈತರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ.

ಈ ಬಗ್ಗೆ ಪದೇ ಪದೇ ಪ್ರಸ್ತಾಪಿಸಿದರೂ ಏನೂ ಪ್ರಯೋಜವಾಗಿಲ್ಲ ಎಂದು ಅಸಮಾಧಾನ ಹೊರ ಹಾಕಿದರು.

## ಶ್ರೀಗಳಿಗೆ ಅವಮಾನ : ವಾಲ್ಮೀಕಿ ಸಮಾಜದಿಂದ ದೂರು ದಾಖಲು



**ಜಗಳೂರು**

ಜಗಳೂರು, ಡಿ.7- ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಕುರಿತು ಅವಹೇಳನಕಾರಿಯಾಗಿ ಮಾತನಾಡಿದರೆನ್ನಲಾದ ವ್ಯಕ್ತಿ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ ವತಿಯಿಂದ ಪೊಲೀಸ್ ಠಾಣೆಯಲ್ಲಿ ಇಂದು ದೂರು ಸಲ್ಲಿಸಲಾಯಿತು.

ಹರಪನಹಳ್ಳಿ ತಾಲ್ಲೂಕಿನ ಹೊಂಬಳಗಟ್ಟೆ ಗ್ರಾಮದ ದೊಡ್ಡಮನಿ ಪ್ರಸಾದ್ ಎಂಬುವರು ಹಲವು ದಿನಗಳಿಂದಲೂ ವಾಲ್ಮೀಕಿ ಶ್ರೀಗಳಿಗೆ ಅವಹೇಳನಕಾರಿಯಾಗಿ ಮಾತನಾಡಿ ಧಿಕ್ಕಾರ ಹಾಕಿದ್ದು, ಸಮಾಜದಲ್ಲಿ ಅಶಾಂತಿ ಉಂಟು ಮಾಡುತ್ತಿರುವ ಹಿನ್ನೆಲೆಯಲ್ಲಿ ಆತನ ವಿರುದ್ಧ ಮೊಕದ್ದಮೆ ದಾಖಲಿಸಿ ಬಂಧಿಸುವುದಲ್ಲದೇ, ಗಡೀಪಾರು ಮಾಡಬೇಕೆಂದು ಸಮಾಜದ ಮುಖಂಡರು ಆಗ್ರಹಪಡಿಸಿದರು.

ನಾಯಕ ಸಮಾಜದ ಕಾರ್ಯದರ್ಶಿ ಸೂರಲಿಂಗಪ್ಪ, ಮುಖಂಡರಾದ ಕೆ.ಎಸ್. ಪ್ರಭು, ಕಾನನಕಟ್ಟೆ ತಿಪ್ಪೇಸ್ವಾಮಿ, ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಬಿ. ರವಿಕುಮಾರ್, ಕಿರಣ್, ಪ.ಪಂ. ಸದಸ್ಯ ಪಾಪಲಿಂಗಪ್ಪ, ಓಬಳೇಶ್, ರಮೇಶ್, ಹನುಮಂತಪ್ಪ ಇನ್ನಿತರರಿದ್ದರು.

## ಮುಂದಿನ ಶತಮಾನ ಕಟ್ಟಲಾಗದು

(1ನೇ ಪುಟದಿಂದ) ನಮ್ಮ ಸರ್ಕಾರ ಸಮಗ್ರ ಸುಧಾರಣೆಗಳನ್ನು ಕೈಗೊಳ್ಳುತ್ತಿದೆ. ಈ ಹಿಂದೆ ತುಂಡು ತುಂಡಾಗಿ ಇಲ್ಲವೇ ಕೆಲವೇ ವರ್ಗಗಳು ಹಾಗೂ ಇಲಾಖೆಗಳಿಗೆ ಸೀಮಿತವಾಗಿ ಸುಧಾರಣೆ ಕೈಗೊಳ್ಳಲಾಗುತ್ತಿತ್ತು ಎಂದು ಪ್ರಧಾನಿ ಹೇಳಿದ್ದಾರೆ.

ಇತ್ತೀಚೆಗೆ ಕೈಗೊಂಡ ಸುಧಾರಣೆಗಳಿಂದಾಗಿ ದೇಶದಲ್ಲಿ ಆತ್ಮವಿಶ್ವಾಸ ಹೆಚ್ಚಾಗಿದೆ. ಇತ್ತೀಚೆಗೆ ನಡೆದ ಪ್ರತಿ ಚುನಾವಣೆಯಲ್ಲೂ ಈ ವಿಶ್ವಾಸ ಕಾಣಬಹುದಾಗಿದೆ. ಉತ್ತರ ಪ್ರದೇಶ ಸೇರಿದಂತೆ ದೇಶದ ಪ್ರತಿಯೊಂದು ಭಾಗದಲ್ಲಿ ನಡೆದ ಚುನಾವಣೆಯಲ್ಲಿ ವಿಶ್ವಾಸ ಕಾಣುತ್ತಿದೆ ಎಂದು ಮೋದಿ ಹೇಳಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಬಡವರು ಹಾಗೂ ಮಧ್ಯಮ ವರ್ಗದವರು ಸರ್ಕಾರದ ಪ್ರಯತ್ನಗಳಿಗೆ ಅಭೂತಪೂರ್ವ ಆಶೀರ್ವಾದ ನೀಡಿದ್ದಾರೆ. ಅವರ ಬೆಂಬಲದಿಂದಾಗಿ ಹೊಸ ಕ್ರಮಗಳನ್ನು ತೆಗೆದುಕೊಳ್ಳಲು ಉತ್ತೇಜನ ಸಿಗುತ್ತಿದೆ ಎಂದಿದ್ದಾರೆ.

## ಬಂದ್‌ನಲ್ಲಿ ಬ್ಯಾಂಕ್ ಒಕ್ಕೂಟಗಳ ಭಾಗಿಯಿಲ್ಲ

(1ನೇ ಪುಟದಿಂದ) ಒಕ್ಕೂಟದ ಸದಸ್ಯರು ಕಪ್ಪು ಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಿ.ಹೆಚ್. ವೆಂಕಟಾಚಲಂ ಹೇಳಿದ್ದಾರೆ.


## ಭದ್ರಾ ಯೋಜನೆಗೆ ಭದ್ರಾ ನೀರು ಬಳಕೆ

(1ನೇ ಪುಟದಿಂದ) ರೈತರನ್ನು ಸತತವಾಗಿ ಕಾಡಿಕೊಂಡೇ ಬಂದಿದೆ. ಅಧಿಕಾರಿಗಳು ಹೇಳಿದಂತೆ ಕೇಳಲಾಗುತ್ತಿದೆ. ಭದ್ರಾ ಜಲಾಶಯದ ನೀರು ಅನ್ಯ ವಿವಿಧ ಉದ್ದೇಶಗಳಿಗೆ ಹರಿಸುವುದು ನಿಲ್ಲಬೇಕಿದೆ.

ಇದೇ ಪರಿಸ್ಥಿತಿ ಮುಂದುವರೆದರೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಸಂಘಟನೆಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಮುಖಂಡರಾದ ಶಾನ್‌ಭೋಗ್ ನಾಗರಾಜ ರಾವ್, ಎ.ಎಂ. ಮಂಜುನಾಥ, ಮಹೇಶ್ ಕುಂದುವಾಡ, ಕರಿಬಸಪ್ಪ ಸೇರಿದಂತೆ ಇತರರು ಇದ್ದರು.

## ಕೂಡ್ಲಿಗಿಯಲ್ಲಿ ವಿಶೇಷ ಕ್ರಿಕೆಟ್ ಪಂದ್ಯಾವಳಿ




ಕೂಡ್ಲಿಗಿ, ಡಿ.7 - ಯೂತ್ ಕ್ರಿಕೆಟರ್ಸ್ ವತಿಯಿಂದ ಆಯೋಜಿಸಲಾಗಿದ್ದ ಎರಡು ದಿನಗಳ ವಿಶೇಷ ಕ್ರಿಕೆಟ್ ಪಂದ್ಯಾವಳಿಯ ಪ್ರಥಮ ಬಹುಮಾನದ ಪ್ರಾಯೋಜಕತ್ವವನ್ನು 5ನೇ ವಾರ್ಡಿನ ಪಟ್ಟಣ ಪಂಚಾಯತಿ ಸದಸ್ಯ ಸೈಯದ್ ಶುಕೂರ್ ವಹಿಸಿದ್ದರು. ಕೂಡ್ಲಿಗಿ ಪಟ್ಟಣ ಪಂಚಾಯತಿ ಸದಸ್ಯ ಚಂದ್ರು ಮಾತನಾಡಿ, ಯುವಕರು ಕ್ರೀಡೆಯ ಕಡೆ ಹೆಚ್ಚು ಆಸಕ್ತಿ ಹೊಂದಿರಬೇಕೇ ಹೊರತು, ಆರೋಗ್ಯವನ್ನು ಹದಗೆಡಿಸುವ ಮತ್ತು ಕಾಲಹರಣ ಮಾಡುವ ಕಾರ್ಯಗಳಲ್ಲಿ ತೊಡಗಿ ಕೊಳ್ಳಬಾರದು ಎಂದು ಯುವಕರಿಗೆ ಹೇಳಿದರು. ಉದ್ಘಾಟನೆ ಸಂದರ್ಭದಲ್ಲಿ ಡಾ. ಷರೀಫ್ ಉಪಸ್ಥಿತರಿದ್ದರು.

## ಪೆಟ್ರೋಲ್ ಏರಿಕೆ

(1ನೇ ಪುಟದಿಂದ) ಉತ್ಪನ್ನಗಳ ಬೆಲೆ ಹೆಚ್ಚಿಸಲಾಗಿದೆ. ಕಳೆದ 18 ದಿನಗಳಲ್ಲಿ ಪೆಟ್ರೋಲ್ ಬೆಲೆ 2.65 ರೂ. ಹಾಗೂ ಡೀಸೆಲ್ ಬೆಲೆ 3.41 ರೂ. ಹೆಚ್ಚಳವಾಗಿದೆ.

**ರಾಮ್ ಅಂಡ್ ಕೋ ಬೀಡಾ ಸ್ಟಾಲ್ ಮಾಹಬೂಬ್‌ಸಾಬ್ (ಬಾಬು) ನಿಧನ**



ದಾವಣಗೆರೆ ಎಸ್.ಎಸ್. ಲೇ ಔಟ್, 4ನೇ ಮೇನ್, 13ನೇ ಕ್ರಾಸ್ ವಾಸಿ ಮಾಹಬೂಬ್‌ಸಾಬ್ (55) ಅವರು ದಿನಾಂಕ 07.12.2020ರ ಸೋಮವಾರ ರಾತ್ರಿ 8 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.12.2020ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ನಗರದ ಪಿ.ಬಿ. ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

## 2.10 ಲಕ್ಷ ಟನ್ ಭತ್ತ ಖರೀದಿ

(1ನೇ ಪುಟದಿಂದ) 10 ಕ್ವಿಂಟಾಲ್‌ನಂತೆ ಪ್ರತಿ ರೈತನಿಂದ ಗರಿಷ್ಠ 50 ಕ್ವಿಂಟಾಲ್ ರಾಗಿ ಖರೀದಿಸಲಾಗುವುದು. ಈಗಿರುವ 3 ಲಕ್ಷ ಮೆಟ್ರಿಕ್ ಟನ್ ಜೊತೆಗೆ ಇನ್ನೂ 1 ಲಕ್ಷ ಮೆಟ್ರಿಕ್ ಟನ್ ರಾಗಿ ಹೆಚ್ಚುವರಿಯಾಗಿ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳಿಸಲು ನಿರ್ಧರಿಸಲಾಗಿದೆ.

ತೊಗರಿ ಖರೀದಿಗಾಗಿ ಡಿ.15ರಿಂದ ನೋಂದಣಿ ಆರಂಭಿಸಲಾಗುವುದು. ಜನವರಿ 1ರಿಂದ ಖರೀದಿ ಪ್ರಕ್ರಿಯೆ ನಡೆಯಲಿದೆ. ಪ್ರತಿ ಎಕರೆಗೆ ಗರಿಷ್ಠ 7.5 ಕ್ವಿಂಟಾಲ್‌ನಂತೆ ಗರಿಷ್ಠ 20 ಕ್ವಿಂಟಾಲ್ ತೊಗರಿಯನ್ನು ಪ್ರತಿ ರೈತನಿಂದ ಖರೀದಿಸಲು ನಿರ್ಧರಿಸಲಾಗಿದೆ.

ಹೆಸರುಕಾಳು, ಉದ್ದು ಹಾಗೂ ಶೇಂಗಾ ಖರೀದಿಗೂ ಸಹ ಸಂಪುಟದ ಉಪ ಸಮಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ.

## ಗ್ರಾಮಗಳಿಗೆ ಅಂತಿಮ ಅಧಿಸೂಚನೆ

(1ನೇ ಪುಟದಿಂದ) ಅರಣ್ಯ ಸಚಿವರೊಂದಿಗೆ ಸಭೆ ನಡೆಸಲಾಗಿದ್ದು, 6.5 ಲಕ್ಷ ಹೆಕ್ಟೇರ್ ಭೂಮಿಯನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

# ಗೆಲುವಿನ ನಗೆ ಬೀರಿದ ದಾವಣಗೆರೆ ಕುಸ್ತಿ ಪಟು ಸ್ವಾತಿ



ಹರಿಹರ, ಡಿ.7- ನಗರದ ಗಾಂಧಿ ಮೈದಾನದಲ್ಲಿ ನಡೆಯುತ್ತಿರುವ ಎರಡು ದಿನಗಳ ಕುಸ್ತಿ ಪಂದ್ಯಾವಳಿಯಲ್ಲಿ ಇಂದಿನ ಹೊನಲು ಬೆಳಕಿನ ಪುರುಷ ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿಯಲ್ಲಿ ದಾವಣಗೆರೆಯ ಕುಸ್ತಿ ಪಟು ಸ್ವಾತಿ, ಗದಗ್‌ನ ತಳವಾರ ಅವರನ್ನು ಸೋಲಿಸಿ ಗೆಲುವಿನ ನಗೆ ಬೀರಿದರು.

**ಹರಿಹರದಲ್ಲಿ ಕುಸ್ತಿ ಪಂದ್ಯಾವಳಿ**

ನಾಡಬಂದ್ ಷಾವಲಿ ಗರಡಿ ಕುಸ್ತಿ ಜೀರ್ಣೋದ್ಧಾರ ಸಮಿತಿ (ಹರಿಹರ) ಹಾಗೂ ಕರ್ನಾಟಕ ರಾಜ್ಯ ಕುಸ್ತಿ ಸಂಘ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹರಿಹರ ಕಿಶೋರ, ಹರಿಹರ ಕೇಸರಿ, ಹರಿಹರ ಕುಮಾರ, ಹರಿಹರ ಕಂಠೀರವ ಬಿರುದುಗಳು ಮತ್ತು ಬೆಳ್ಳಿ ಟ್ರೋಫಿ ನೀಡಲಾಗುತ್ತದೆ.

ಈ ಸಂದರ್ಭದಲ್ಲಿ ಕುಸ್ತಿ ಸಮಿತಿ ಅಧ್ಯಕ್ಷ ಎಂ.ಆರ್.ಚಂದ್ರಶೇಖರ್, ಜಗದೀಶ್ ಚೂರಿ, ಸುರೇಶ್ ಪೈಲ್ವಾನ್, ರೇವಣಪ್ಪ ಪೈಲ್ವಾನ್, ದಾವಣಗೆರೆ ತರಬೇತುದಾರ ವಿನಯ್ ಕುಮಾರ್ ಇನ್ನಿತರರಿದ್ದರು.

## ಬಹಿರಂಗದ ಅಲಂಕಾರ ಕ್ಷಣಿಕ, ಅಂತರಂಗದ ಶೃಂಗಾರ ಮುಖ್ಯ



ಚಿತ್ರದುರ್ಗ, ಡಿ. 7 - ಭಾರತೀಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿದ ಕೀರ್ತಿ ಗ್ರಾಮೀಣ ಪ್ರದೇಶದ ಜನರಿಗೆ ಸಲ್ಲುತ್ತದೆ. ಬದುಕನ್ನು ಶೃಂಗರಿಸಿಕೊಳ್ಳುವ ಸಂದರ್ಭ ತಂದುಕೊಳ್ಳಬೇಕು. ಬಹಿರಂಗದ ಅಲಂಕಾರ ಕ್ಷಣಿಕವಾದುದು. ಅಂತರಂಗದ ಶೃಂಗಾರ ಮುಖ್ಯ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಸಹಯೋಗದಲ್ಲಿ ನಡೆದ ಮೂವತ್ತನೇ ವರ್ಷದ ಹನ್ನೆರಡನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಶರಣರು ಆಶೀರ್ವಚನ ನೀಡಿದರು.

ಪ್ರೇರಣೆ ಉಜ್ವಲವಾದ ಬದುಕನ್ನು ಕಟ್ಟಿಕೊಡುತ್ತದೆ. ಬದುಕನ್ನು ಕಟ್ಟಿಕೊಳ್ಳಲು ಹಣ, ಶ್ರೀಮಂತಿಕೆ ಮುಖ್ಯವಲ್ಲ. ಬಸವಣ್ಣನವರಿಗೆ ಶರಣರು, ಶರಣರ ಪ್ರೇರಣೆ ಬಸವಣ್ಣನವರಿಗಾಯಿತು. ಗುಡ್ಡಾಪುರದ ಶರಣೆ ದಾನಮ್ಮ ಸಾಮೂಹಿಕ ಕಲ್ಯಾಣ ಮಹೋತ್ಸವ ಮಾಡುತ್ತ ಅನ್ನ ದಾಸೋಹ ನೆರವೇರಿಸಿ ಪ್ರೇರಣೆಯಾಗಿದ್ದಾರೆ. 12ನೇ ಶತಮಾನದ ಬಸವಾದಿ ಪ್ರಮಥರು ನಮಗೆಲ್ಲ ಪ್ರೇರಣೆಯಾಗಿದ್ದಾರೆ ಎಂದರು.

ಕೆಆರ್‌ಐಡಿಎಲ್ ನಿಗಮದ ಅಧ್ಯಕ್ಷ ಎಂ.ರುದ್ರೇಶ್ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ನಾವೆಲ್ಲಾ ಎಷ್ಟೇ ದುಡಿದು ಶ್ರೀಮಂತರಾದರೂ ಇನ್ನೊಬ್ಬರ ಹಸಿವಿಗೆ ಸ್ಪಂದಿಸಬೇಕು. ಕೊರೊನಾ ವೈರಾಣು ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡು ಸಾವು ನೋವುಗಳಾಗಿವೆ. ಹಳ್ಳಿ ಜನರ ಸೇವೆ ಅಮೂಲ್ಯವಾದುದು. ನಾವು ದೇಶದ ರಕ್ಷಣೆಗೆ ಮುಂದಾಗಬೇಕು ಎಂದು ತಿಳಿಸಿದರು.

ಕನಕಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಗನ್ನಾಥ ವೇದಿಕೆಯಲ್ಲಿದ್ದರು. ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ. ಜೆ.ಪರಮಶಿವಯ್ಯ, ಕೆಇಬಿ ಷಣ್ಮುಖಪ್ಪ, ಎಂ.ಟಿ. ಮಲ್ಲಿಕಾರ್ಜುನಸ್ವಾಮಿ, ಪೈಲ್ವಾನ್ ತಿಪ್ಪೇಸ್ವಾಮಿ, ಪಿ.ವೀರೇಂದ್ರಕುಮಾರ್, ಎನ್.ತಿಪ್ಪಣ್ಣ, ಗುತ್ತಿನಾಡು ಪ್ರಕಾಶ್ ಮತ್ತಿತರರಿದ್ದರು. ಇದೇ ಸಂದರ್ಭದಲ್ಲಿ ಎರಡು ಜೊತೆ ಅಂತರ್ಜಾತಿ ಸೇರಿದಂತೆ 12 ಜೋಡಿಗಳ ಮದುವೆ ನೆರವೇರಿತು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ವೀರಭದ್ರಪ್ಪ ಸ್ವಾಗತಿಸಿದರು. ಜ್ಞಾನಮೂರ್ತಿ ನಿರೂಪಿಸಿದರು.

## ಗ್ರಾಪಂ ಚುನಾವಣೆ : ಕಾಂಗ್ರೆಸ್ ಗೆಲುವಿಗೆ ಬಸವರಾಜು ಶಿವಗಂಗಾ ಸಂಚಾರ



ಚನ್ನಗಿರಿ, ಡಿ.7- ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಅಧಿಕ ಸ್ಥಾನಗಳನ್ನು ಕಾಂಗ್ರೆಸ್ ಪಕ್ಷದಿಂದ ಗೆಲ್ಲಲು ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ. ಶಿವಗಂಗಾ ಅವರು ಚನ್ನಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಿಂಚಿನ ಸಂಚಾರ ನಡೆಸುತ್ತಿದ್ದಾರೆ.

ಮೆದಿಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪಕ್ಷದ ಗೆಲುವಿಗಾಗಿ ರಣತಂತ್ರ ರೂಪಿಸಿದ್ದು, ಪಕ್ಷದ ಮುಖಂಡರೊಡನೆ ಚರ್ಚೆ ಕೂಡ ನಡೆಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಗೆ ಗ್ರಾಮ ಪಂಚಾಯ್ತಿ ಚುನಾವಣೆ ದಿಕ್ಸೂಚಿಯಾಗಲಿದೆ.

ಮೆದಿಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಕಡೆ ಹೆಚ್ಚು ಒಲವು ಇದೆ ಎಂದು ಬಸವರಾಜು ಹೇಳಿದರು.

## ನೂತನ ಕೃಷಿ ಕಾಯ್ದೆಗಳಿಗೆ ಬೆಂಬಲ

(1ನೇ ಪುಟದಿಂದ) (ಅಟ್ಟಾರ್) ರಾಷ್ಟ್ರೀಯ ಅಧ್ಯಕ್ಷ ಅತ್ತಾರ ಸಿಂಗ್ ಸಂಧು ಸಹ ನಿಯೋಗದಲ್ಲಿದ್ದರು.

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಕೆಲ ರೈತ ಸಂಘಟನೆಗಳು ಮಂಗಳವಾರ ಭಾರತ್ ಬಂದ್‌ಗೆ ಕರೆ ನೀಡಿರುವ ನಡುವೆ ಈ ಬೆಳವಣಿಗೆಯಾಗಿದೆ.

ಈ ರೀತಿಯ ಪ್ರತಿಭಟನೆಗಳು ಮುಂದುವರೆಯುತ್ತವೆ, ನಾವು ಅವುಗಳನ್ನು ನಿಭಾಯಿಸುತ್ತೇವೆ. ನೀವು ಈ ಮಸೂದೆಗಳನ್ನು ಬೆಂಬಲಿಸುತ್ತಿರುವುದಕ್ಕೆ ಧನ್ಯವಾದ ಎಂದು ನಿಯೋಗಕ್ಕೆ ಸಚಿವ ತೋಮರ್ ತಿಳಿಸಿದ್ದಾರೆ.

ಸ್ವಾಮಿನಾಥನ್ ಆಯೋಗ 2006ರಲ್ಲೇ ಕೃಷಿ ವಲಯದ ಸುಧಾರಣೆಗೆ ಶಿಫಾರಸ್ಸು ಮಾಡಿತ್ತು. ಇವುಗಳನ್ನು ಜಾರಿಗೆ ತರಲು 2006ರಿಂದ 2014ರ ನಡುವೆ ಸಮಯ ಇತ್ತು. ಹಿಂದಿನ ಸರ್ಕಾರಗಳು ಮನಸ್ಸು ಮಾಡಿದ್ದರೆ ಶಿಫಾರಸ್ಸುಗಳನ್ನು ಜಾರಿಗೆ ತರಬಹುದಿತ್ತು. ಆದರೆ, ಅವರಿಗೆ ಜಾರಿಗೆ ತರುವ ದಿಟ್ಟತನ ಇರಲಿಲ್ಲ ಎಂದು ಕೇಂದ್ರ ಕೃಷಿ ಸಚಿವ ಹೇಳಿದ್ದಾರೆ.

## ಬಂದ್‌ಗೆ ರಾಜ್ಯ ರೈತರ ಬೆಂಬಲ

(1ನೇ ಪುಟದಿಂದ) ವಾಣಿಜ್ಯ ವಹಿವಾಟು ನಡೆಸುವವರು, ಹೋಟೆಲ್ ಉದ್ಯಮ, ಸಾರಿಗೆ ಸೇರಿದಂತೆ ಎಲ್ಲ ರಂಗದವರೂ ಬೆಂಬಲ ನೀಡಿ ಎಂದು ಕೋರಿದ್ದಾರೆ. ರೈತರ ಕೂಗಿಗೆ ಬೆಂಬಲಿಸಲು ಉದ್ದಿಮೆದಾರರು ಇದುವರೆಗೂ ತಮ್ಮ ನಿಲುವು ಪ್ರಕಟಿಸಿಲ್ಲ. ಸರ್ಕಾರ ಮಾತ್ರ ಎಂದಿನಂತೆ ಜನ ಜೀವನ ಇರುತ್ತದೆ ಎಂದಿದೆ.

ರಾಜ್ಯ ಸಾರಿಗೆ ಸಂಸ್ಥೆಗಳ ಬಸ್‌ಗಳು ರಸ್ತೆಗೆ ಇಳಿಯಲಿವೆ. ಯಾರಾದರೂ ಕಾನೂನು ಕೈಗೆತ್ತಿಕೊಂಡರೆ, ಅಂಥವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಎಚ್ಚರಿಕೆ ನೀಡಿದೆ.

ರೈತರ ಬೆಂಬಲಕ್ಕೆ ಪ್ರತಿಪಕ್ಷಗಳು ನಿಂತಿವೆ. ಆದರೆ, ಅವರ ಹೋರಾಟದಲ್ಲಿ ಪಾಲ್ಗೊಳ್ಳುವ ಬಗ್ಗೆ ಸ್ಪಷ್ಟತೆ ಇಲ್ಲ.

# 24 ಗಂಟೆಯಲ್ಲೇ ಮೊಬೈಲ್ ಕಳ್ಳರ ಬಂಧನ



ದಾವಣಗೆರೆ, ಡಿ.7- ಮೊಬೈಲ್ ಅಂಗಡಿ ಬೀಗ ಮುರಿದು ಮೊಬೈಲ್ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಘಟನೆ ನಡೆದ 24 ಗಂಟೆಗಳಲ್ಲಿ ಬಂಧಿಸುವಲ್ಲಿ ಕೆಟಿಜೆ ನಗರ ಪೊಲೀಸರು ಯಶಸ್ವಿಯಾಗಿದ್ದು, ಕಳವಾದ ಒಟ್ಟು 19 ಮೊಬೈಲ್ ಗಳ ಪೈಕಿ ಸುಮಾರು 82,700 ರೂ. ಮೌಲ್ಯದ 17 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕೆಬಿ ಬಡಾವಣೆ ವಾಸಿ ಎನ್ನಲಾದ ತರಗಾರ ಕೆಲಸಗಾರ ಚಂದ್ರ ಅಲಿಯಾಸ್ ಚಂದ್ರಪ್ಪ, ಪಿಜೆ ಬಡಾವಣೆ ವಾಸಿ ಎನ್ನಲಾದ ಹಮಾಲಿ ಕೆಲಸಗಾರ ಅನಿಲ್ ಕುಮಾರ್ ಬಂಧಿತರು.

ನಗರದ ಕೆ.ಬಿ. ಬಡಾವಣೆಯ ಬಿಜೆಪಿ ಕಚೇರಿ ಸಮೀಪ ಮೊನ್ನೆ ರಾತ್ರಿ ಶಶಿ ಎಂಬುವರಿಗೆ ಸೇರಿದ ಮೊಬೈಲ್ ಅಂಗಡಿಯ ಶೆಟ್ರಸ್ ಬೀಗವನ್ನು ಮುರಿದು ಕಳ್ಳರು ಮೊಬೈಲ್‌ಗಳನ್ನು ದೋಚಿದ್ದರು. ಈ ಕೃತ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಪ್ರಕರಣ ದಾಖಲಿಸಿಕೊಂಡಿದ್ದ ಕೆಟಿಜೆ ನಗರ ಪೊಲೀಸರು ಕಳ್ಳರ ಸೆರೆಗೆ ಪೊಲೀಸ್ ಅಧೀಕ್ಷಕ ಹನುಮಂತರಾಯ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಜೀವ್, ನಗರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ನಾಗೇಶ್ ಯು. ಐತಾಳ ಮತ್ತು ಕೇಂದ್ರ ವೃತ್ತ ನಿರೀಕ್ಷಕ ಗುರು ಬಸವರಾಜ್ ಅವರ ಮಾರ್ಗದರ್ಶನದಲ್ಲಿ ಬಲೆ ಬೀಸಿದ್ದರು. ಇಂದು ಬೆಳಿಗ್ಗೆ ಕೆಟಿಜೆ ನಗರ ಪೊಲೀಸ್ ಠಾಣೆಯ ಪಿಎಸ್ ಐ ಗಳಾದ ಅಬ್ದುಲ್ ಖಾದರ್ ಜಿಲಾನಿ, ಆರ್. ವೀರೇಶ್ ಅವರು ಸಿಬ್ಬಂದಿಗಳಾದ ಶಂಕರ್ ಜಾಧವ್, ಪ್ರಕಾಶ, ಷಣ್ಮುಖ, ದಾದಾ ಖಲಂದರ್, ಮಂಜುನಾಥ್, ಗಿರೀಶ್ ಗೌಡ ತಂಡವು ಪ್ರಕರಣ ಬೇಧಿಸಿದ್ದಾರೆ.

## ಮನೆಗಳ್ಳರ ಬಂಧನ : ಲಕ್ಷಾಂತರ ಮೌಲ್ಯದ ವಾಹನ, ಚಿನ್ನಾಭರಣ ವಶ

ದಾವಣಗೆರೆ, ಡಿ.7 - ಇಬ್ಬರು ಮನೆಗಳ್ಳರನ್ನು ಬಂಧಿಸಿರುವ ಸಂತೇಬೆನ್ನೂರು ಪೊಲೀಸರು, ಕಾರು ಸೇರಿದಂತೆ ಲಕ್ಷಾಂತರ ರೂ. ಮೌಲ್ಯದ ವಾಹನ ಮತ್ತು ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ರೋಷನ್ ಮತ್ತು ಚಾಂದ್ ಪೀರ್ ಬಂಧಿತ ಆರೋಪಿಗಳು. ಇಬ್ಬರೂ ಚನ್ನಗಿರಿ ಪಟ್ಟಣದ ನಿವಾಸಿಗಳೆಂದು ಹೇಳಲಾಗಿದ್ದು, ಹತ್ತು ಹಲವು ಪ್ರಕರಣಗಳಲ್ಲಿ ಭಾಗಿಯಾಗಿರುವುದು ವಿಚಾರಣೆಯಿಂದ ತಿಳಿದು ಬಂದಿದೆ.

ಚಾಂದ್‌ಪೀರ್ ನಿಂದ ಸಂತೇಬೆನ್ನೂರು ಠಾಣೆಯ 2 ಪ್ರಕರಣಗಳು ಮತ್ತು ಚನ್ನಗಿರಿ ಠಾಣೆಯ 5 ಪ್ರಕರಣಗಳು ಹಾಗೂ ಶಿವಮೊಗ್ಗ ನಗರದ ದೊಡ್ಡಪೇಟೆ ಪೊಲೀಸ್ ಠಾಣೆಯ 1 ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 14 ಲಕ್ಷ ರೂ. ಮೌಲ್ಯದ 1 ಇನ್ನೋವಾ ಕಾರು, 40 ಗ್ರಾಂ ಬಂಗಾರದ ಒಡವೆಗಳು, 5 ಬೈಕ್ ಗಳು, 14 ಮೊಬೈಲ್ ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಂತೇಬೆನ್ನೂರು ಠಾಣಾ ಪಿಎಸ್‌ಐ ಶಿವರುದ್ರಪ್ಪ ಎಸ್.ಮೇಟಿ ಮತ್ತು ಅವರ ಠಾಣಾ ಸಿಬ್ಬಂದಿಗಳಾದ ಡಿ. ನಿಂಗಣ್ಣ, ಮೊಹಮದ್ ಅಕ್ರಂವುಲ್ಲಾ, ವಿ.ಟಿ. ಉಮೇಶ ಮತ್ತು ಧರ್ಮಪ್ಪ, ಕೊಟ್ರೇಶ್, ರುದ್ರಸ್ವಾಮಿ, ಆರ್. ನಾಗರಾಜ್ ನಾಯ್ಕ, ರಂಗೇಗೌಡ, ಜೆ. ರಂಗಸ್ವಾಮಿ, ಚನ್ನಗಿರಿ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್ ಐ ರೂಪ್ಲಿಬಾಯಿ, ಅವರ ಸಿಬ್ಬಂದಿಗಳಾದ ರುದ್ರೇಶ್, ಮಂಜುನಾಥ ಪ್ರಸಾದ್, ರಂಗಸ್ವಾಮಿ, ಉಮಾಪತಿ, ಸಂತೇಬೆನ್ನೂರು ಠಾಣೆಯ ಸೋಮಶೇಖರ್ ಸೇರಿದಂತೆ ಇತರೆ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

# ಲಾಕ್‌ಡೌನ್ ಅವಧಿ ವೇತನ ಬಿಡುಗಡೆಗೆ ಹೊರಗುತ್ತಿಗೆ ಕಾರ್ಮಿಕರ ಆಗ್ರಹ




ದಾವಣಗೆರೆ, ಡಿ.7- ಇಲಾಖೆಯ ಹಾಸ್ಟೆಲ್, ವಸತಿ ಶಾಲೆ, ಆಶ್ರಮ ಶಾಲೆ ಹೊರಗುತ್ತಿಗೆ ಕಾರ್ಮಿಕರಿಗೆ ಲಾಕ್‌ಡೌನ್ ಅವಧಿಯ ವೇತನ ಬಿಡುಗಡೆ ಮತ್ತು ಎಂದಿನಂತೆ ಕೆಲಸದಲ್ಲಿ ಮುಂದುವರೆಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಕಾರ್ಮಿಕರು ನಗರದ ಜಿಲ್ಲಾ ಪಂಚಾಯತ್ ಮುಂಭಾಗದಲ್ಲಿ ಮೊನ್ನೆ ಪ್ರತಿಭಟನೆ ನಡೆಸಿದರು. ನಂತರ ಜಿಲ್ಲಾ ಕಾರ್ಯನಿರ್ವಹಣಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲೆಯ ವಿವಿಧ ಇಲಾಖೆಗಳ ಹಾಸ್ಟೆಲ್, ವಸತಿ ಶಾಲೆ ಮತ್ತು ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿಗಳು ಹಾಗೂ ಕಾವಲುಗಾರರು, ಹೊರಗುತ್ತಿಗೆ ಕಾರ್ಮಿಕರು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಾಕ್‌ಡೌನ್ ಅವಧಿಯಲ್ಲಿ ಎಲ್ಲಾ ಗುತ್ತಿಗೆ ಕಾರ್ಮಿಕರಿಗೂ ವೇತನ ನೀಡಬೇಕೆಂದು ಸುತ್ತೋಲೆ ಹೊರಡಿಸಿವೆ. ಆದರೆ ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳು ವೇತನ ನೀಡಿದರೆ ಇನ್ನೂ ದಾವಣಗೆರೆ ಜಿಲ್ಲೆಯಲ್ಲಿ ಲಾಕ್‌ಡೌನ್ ಅವಧಿಯ ವೇತನ ನೀಡಲು ನಿರಾಕರಿಸುತ್ತಿದ್ದಾರೆ. ಕೆಲವು ಕಡೆ ಬಿಸಿಎಂ ಇಲಾಖೆಯ ಮೆಟ್ರಿಕ್ ನಂತರದ ಹಾಸ್ಟೆಲ್ ಕಾರ್ಮಿಕರಿಗೆ ಮಾತ್ರ ಏಪ್ರಿಲ್ ಮತ್ತು ಮೇ ತಿಂಗಳ ವೇತನ ನೀಡಿದ್ದು, ಮೆಟ್ರಿಕ್ ಪೂರ್ವ, ವಸತಿ ಶಾಲೆ ಮತ್ತು ಆಶ್ರಮ ಶಾಲೆಗಳ ಕಾರ್ಮಿಕರಿಗೆ ವೇತನ ನೀಡಲು ನಿರಾಕರಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಮಂಜುನಾಥ್ ಕೈದಾಳೆ, ಜಿಲ್ಲಾ ಉಪಾಧ್ಯಕ್ಷ ತಿಪ್ಪೇಸ್ವಾಮಿ ಅಣಬೇರು, ಜಿಲ್ಲಾ ಕಾರ್ಯದರ್ಶಿ ಸ್ವಾಮಿ ನಿಂಗಪ್ಪ, ಮಂಜುಳಮ್ಮ, ಮನೋಹರ್, ಈಶ್ವರ್, ಸುಮಕ್ಕ, ರಂಗಮ್ಮ, ಜಯಲಕ್ಷ್ಮಿ, ರಾಮಣ್ಣ, ಮಹೇಶ್, ರತ್ನಮ್ಮ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಹತಾಶೆಗೊಂಡ ಕಾಂಗ್ರೆಸ್‌ನಿಂದ ಅಪಪ್ರಚಾರ



ದಾವಣಗೆರೆ, ಡಿ.7- ಮನೆ ಮನೆಗೆ ನಗರ ಪಾಲಿಕೆ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದರೂ, ವಿರೋಧ ಪಕ್ಷ ಕಾಂಗ್ರೆಸ್ ನಿಂದ ಅಪಪ್ರಚಾರ ಮಾಡುವ ಮೂಲಕ ಸುಳ್ಳು ಆರೋಪ ಮಾಡುತ್ತಿರುವುದಾಗಿ ಪಾಲಿಕೆ ನಾಮನಿರ್ದೇಶನ ಸದಸ್ಯರಾದ ಹೆಚ್.ಸಿ. ಜಯಮ್ಮ ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಹೊಸ ಸಿಬ್ಬಂದಿ ನೇಮಿಸಿಲ್ಲ. ಪ್ರತಿ ಇಲಾಖೆಯಿಂದ ಇಬ್ಬರಂತೆ ಒಟ್ಟು 16 ಸಿಬ್ಬಂದಿಗಳನ್ನು ಮಾತ್ರ ಈ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲಾಗುತ್ತಿದೆ. ಅಂತಹವರಿಗೆ ವಿಶೇಷ ಭತ್ಯೆ ನೀಡುತ್ತಿಲ್ಲ. ಇನ್ನುಳಿದ 300ಕ್ಕೂ ಅಧಿಕ ಸಿಬ್ಬಂದಿ ಪಾಲಿಕೆ ಕಚೇರಿಯಲ್ಲಿ ಕಾರ್ಯ ನಿರ್ವಹಿಸುವುದರಿಂದ ಜನರಿಗೆ ಯಾವುದೇ ತೊಂದರೆಯಾಗುತ್ತಿಲ್ಲ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪಾಲಿಕೆ ಕಚೇರಿಯಿಂದ ದೂರದಲ್ಲಿರುವ ಆಜಾದ್ ನಗರ, ಭಾಷಾ ನಗರ, ಗಾಂಧಿ ನಗರ, ಶಿವನಗರ, ಎಸ್.ಎಂ.ಕೃಷ್ಣ ನಗರ, ಎಸ್‌ಪಿಎಸ್ ನಗರದಂತಹ ಪ್ರದೇಶಗಳ ಜನರಿಗೆ ಮನೆ ಬಾಗಿಲಿಗೆ ನಗರ ಪಾಲಿಕೆ ಕಾರ್ಯಕ್ರಮದಿಂದ ಪ್ರಯೋಜನವಾಗುತ್ತಿದೆ. ಈವರೆಗೆ 8 ವಾರ್ಡ್‌ಗಳಲ್ಲಿ ಕಾರ್ಯಕ್ರಮ ನಡೆದಿದ್ದು, 10,94,697 ರೂ. ಆಸ್ತಿ ತೆರಿಗೆ, ನೀರಿನ ತೆರಿಗೆ ಸಂಗ್ರಹವಾಗಿದೆ. 123 ಜನನ-ಮರಣ ಪ್ರಮಾಣ ಪತ್ರ, 7 ಕಟ್ಟಡ ಪರವಾನಿಗೆ, 86 ಉದ್ಯಮ ಪರವಾನಿಗೆ, 21 ಖಾತೆ ಬದಲಾವಣೆ, 48 ಖಾತೆ ಉತಾರ, 71 ಆಶ್ರಯ ಸೇರಿದಂತೆ ಅನೇಕ ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೆ ಒದಗಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ನಾಮ ನಿರ್ದೇಶನ ಸದಸ್ಯರಾದ ಶಿವನಗೌಡ ಪಾಟೀಲ್, ರುದ್ರೇಗೌಡ ಸೇರಿದಂತೆ ಇತರರು ಇದ್ದರು.

### ಗುರು ...

ನಿನಗೆ ನನ್ನ ನಮನ, ನಮ್ಮೆಡೆಗೆ ನಿನ್ನ ಗಮನ
ನೀನು ಜ್ಞಾನದ ಕಾನನ, ತೋಳೆದಿರಿ ನಮ್ಮ
ಅಜ್ಞಾನ, ತುಂಬಿದಿರಿ ನಮ್ಮ
ತನುಮನ ನಿಮ್ಮನ್ನು ಗುರುವಾಗಿ
ಪಡೆದ ನಾವೇ ಪಾವನ.

- ಜಿ. ರಾಧ, ಉಪನ್ಯಾಸಕರು

## ಐಎಂಎ ತನಿಖೆ ಚುರುಕು


ದಾವಣಗೆರೆ, ಡಿ.7- ಐಎಂಎ ತನಿಖೆಯನ್ನು ಸಿಬಿಐಗೆ ವಹಿಸಿ, ತ್ವರಿತ ತನಿಖೆಗೆ ಸಹಕರಿಸಿದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಹಾಗೂ ಬಿಜೆಪಿ ಮುಖಂಡರುಗಳಿಗೆ ಅಭಿನಂದಿಸುವುದಾಗಿ ಅಲ್ಪಸಂಖ್ಯಾತರ ಬಿಜೆಪಿ ಮುಖಂಡ ಎಸ್.ಅಬ್ದುಲ್ ಮಜೀದ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮನ್ಸೂರ್ ಅಲಿಖಾನ್ ಮಾವ ಅಬ್ಬಾಸ್ ಖಾನ್ ದುಬೈನಲ್ಲಿದ್ದು ಇವನನ್ನು ತನಿಖೆಗೊಳಪಡಿಸಿದರೆ ಉಳಿದ ಹಣವನ್ನೂ ವಾಪಸ್ ಕೊಡಿಸಿ, ಅಲ್ಪಸಂಖ್ಯಾತ ಹೂಡಿಕೆದಾರರಿಗೆ ನ್ಯಾಯ ದೊರಕಿಸಿಕೊಟ್ಟಂತಾಗುತ್ತದೆ ಎಂದು ಅಭಿಪ್ರಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ತನ್ವೀರ್ ಅಹ್ಮದ್, ಜಬೀವುಲ್ಲಾ, ಮನ್ಸೂರ್ ಉಪಸ್ಥಿತರಿದ್ದರು.

# ಬೇಸಿಗೆ ಹಂಗಾಮಿನಲ್ಲಿ ಬೆರಕೆ ಭತ್ತ ನಿರ್ವಹಣೆ ಕ್ರಮಗಳು

ದಾವಣಗೆರೆ, ಡಿ.7- ಜಿಲ್ಲೆಯಾದ್ಯಂತ ಬೇಸಿಗೆ ಹಂಗಾಮಿನಲ್ಲಿ ವಿವಿಧ ನೀರಾವರಿ ಮೂಲಗಳಿಂದ ಸುಮಾರು 60,000 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತದೆ. ಈ ಸಮಯದಲ್ಲಿ ರೈತ ಬಾಂಧವರು ಸಸಿ ಮಡಿ ತಯಾರಿಸುವ ಸಿದ್ದತೆಯಲ್ಲಿದ್ದಾರೆ. ಈ ಸಮಯದಲ್ಲಿ ಬೆರಕೆ ಭತ್ತ ನಿರ್ವಹಣೆ ಬಗ್ಗೆ ನಿಗಾ ವಹಿಸುವುದು ತುಂಬಾ ಮುಖ್ಯ.



ಮುಂಗಾರು ಹಂಗಾಮಿನಲ್ಲಿ ವಿವಿಧ ತಳಿಗಳನ್ನು ರೈತರು ನಾಟಿ ಮಾಡಿದ್ದು, ಭತ್ತದ ಬೆಳೆಯನ್ನು ಕಾಲಾವಧಿಗನುಗುಣವಾಗಿ ನವೆಂಬರ್ ತಿಂಗಳ ಅಂತ್ಯದಿಂದ ಡಿಸೆಂಬರ್‌ವರೆಗೂ ಕಟಾವು ಮಾಡುತ್ತಿದ್ದಾರೆ. ಈಗ ಬಹುತೇಕ ಭತ್ತದ ಕೊಯ್ಲನ್ನು ಯಂತ್ರದ ಮೂಲಕ ಮಾಡುವುದರಿಂದ ಸಾಕಷ್ಟು ಪ್ರಮಾಣದ ಭತ್ತದ ಬೀಜಗಳು ಗದ್ದೆಯಲ್ಲಿ ಉದುರುತ್ತವೆ. ಹೀಗೆ ಉದುರಿದ ಕಾಳುಗಳು ಬೇಸಿಗೆ ಹಂಗಾಮಿನಲ್ಲಿ ಬೆಳೆದು ನಿಂತು ಇತರೆ ತಳಿಯೊಂದಿಗೆ ಬೆರಕೆಯಾಗುತ್ತವೆ.

ಬೆರಕೆ ಭತ್ತ ಗದ್ದೆಯಲ್ಲಿ ಇದ್ದಲ್ಲಿ ಬೇಸಾಯ ಹಾಗೂ ಕೊಯ್ಲಿನ ನಿರ್ವಹಣೆ ಏರುಪೇರಾಗುವುದು. ಆದ್ದರಿಂದ ಮುಂಜಾಗ್ರತೆ ಕ್ರಮವಾಗಿ ಉತ್ತಮ ಭೂಮಿ ಸಿದ್ಧತೆ ಅತ್ಯಗತ್ಯ. ಮುಂಗಾರಿನಲ್ಲಿ ಬೆಳೆದ ತಳಿಯನ್ನೇ ಬೇಸಿಗೆಯಲ್ಲಿ ಬೆಳೆದಲ್ಲಿ ಸಮಸ್ಯೆಯಾಗುವುದಿಲ್ಲ. ಆದರೆ ಇತರೆ ತಳಿಗಳನ್ನು ಬೆಳೆಯವುದಾದರೆ ಮುಂಜಾಗ್ರತೆ ವಹಿಸಬೇಕಾಗುತ್ತದೆ.

ಮುಂಗಾರು ಹಂಗಾಮಿನ ಭತ್ತ ಕಟಾವು ಮಾಡಿದ ತಕ್ಷಣ ಗದ್ದೆಯಲ್ಲಿರುವ ತೇವಾಂಶ ಬಳಸಿಕೊಂಡು ನೇಗಿಲು ಅಥವಾ ಟ್ರ್ಯಾಕ್ಟರ್‌ನಿಂದ ಒಂದು ಸಾರಿ ಉಳುಮೆ ಮಾಡಿ ನಂತರ 8 ರಿಂದ 10 ದಿನಗಳವರೆಗಾದರೂ ನೀರು ನಿಲ್ಲಿಸಿ ಕೊಳೆಯಲು ಬಿಡಬೇಕು. ಹೀಗೆ ಮಾಡುವುದರಿಂದ ಮುಂಗಾರು ಹಂಗಾಮಿನಲ್ಲಿ ಗದ್ದೆಯಲ್ಲಿ ಉದುರಿದ ಬೀಜಗಳು ಸುಪ್ತಾವಸ್ಥೆ ಮುಗಿಸಿ ಮೊಳಕೆಯೊಡೆಯುತ್ತವೆ. ನಂತರ ಮತ್ತೊಮ್ಮೆ ಟ್ರ್ಯಾಕ್ಟರ್‌ನಿಂದ ರೊಳ್ಳೆ ಹೊಡೆದು ಮೊಳಕೆಯೊಡೆದ ಭತ್ತವನ್ನು ಭೂಮಿಗೆ ಸೇರಿಸುವುದರಿಂದ ಬೆರಕೆ ಭತ್ತದ ಸಮಸ್ಯೆಯನ್ನು ನಿರ್ವಹಿಸಬಹುದು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ತಿಳಿಸಿದ್ದಾರೆ.

## ಸೌಹಾರ್ದ ಪ್ರಕಾಶನ: ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಕಥಾ ಸ್ಪರ್ಧೆ

ದಾವಣಗೆರೆ,ಡಿ.7-ನಗರದ ಸೌಹಾರ್ದ ಪ್ರಕಾಶನ ಸಂಸ್ಥೆಯಿಂದ 'ಮಾನವೀಯ ಮೌಲ್ಯಗಳು ಆಧಾರಿತವಾಗಿರಬೇಕು' ವಿಷಯ ಕುರಿತು ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದ ಕಥಾ ಸ್ಪರ್ಧೆ ಏರ್ಪಡಿಸಲಾಗಿದೆ.

ಶಿಕ್ಷಕರಾಗಿದ್ದ ದಿ. ಎಂ. ಬಿ.ಶಂಕರಮೂರ್ತಿ ಅವರ 5ನೇ ವರ್ಷದ ಪುಣ್ಯಸ್ಮರಣೆ ಪ್ರಯುಕ್ತ ಈ ಸ್ಪರ್ಧೆ ಆಯೋಜನೆಗೊಂಡಿದೆ ಎಂದು ಪ್ರಕಾಶನದ ಪ್ರಕಾಶಕರೂ, ಹಿರಿಯ ಸಾಹಿತಿಯೂ ಆಗಿರುವ ಶಿಕ್ಷಕಿ ಶ್ರೀಮತಿ ಎ.ಸಿ. ಶಶಿಕಲಾ ಶಂಕರಮೂರ್ತಿ ತಿಳಿಸಿದ್ದಾರೆ.

13ರಿಂದ 16ನೇ ವಯಸ್ಸಿನೊಳಗಿನ ವಿದ್ಯಾರ್ಥಿಗಳು ಕೈ ಬರಹದಲ್ಲಿ ಸ್ವಂತ ಕಥೆಯನ್ನು A4 ಅಳತೆಯ ಎರಡು ಪುಟದೊಳಗೆ ರಚಿಸಬೇಕು. ರಚಿಸಿದ ಕಥೆಯನ್ನು ತಾವು ಓದುತ್ತಿರುವ ಶಾಲೆಯ ಮುಖ್ಯ ಶಿಕ್ಷಕರಿಂದ ದೃಢೀಕರಿಸಿ, ತಮ್ಮ ವ್ಯಾಸಂಗದ ಪ್ರಮಾಣ ಪತ್ರದೊಂದಿಗೆ ಸಲ್ಲಿಸಬೇಕು.

ಸೌಹಾರ್ದ ಪ್ರಕಾಶನ, 572/10, 'ಅವ್ವನ ಒಡಲು' ಸರಸ್ವತಿ ಬಡಾವಣೆ ಮುಖ್ಯ ರಸ್ತೆ, ಸೋಮೇಶ್ವರ ಬಡಾವಣೆ, ದಾವಣಗೆರೆ-577004 ಈ ವಿಳಾಸಕ್ಕೆ ಕಥೆಯನ್ನು ಅಂಚೆ ಅಥವಾ ಕೋರಿಯರ್ ಮೂಲಕ ಇದೇ ದಿನಾಂಕ 21ರೊಳಗೆ ಕಳುಹಿಸಬೇಕು. ಉತ್ತಮವಾದ ಮೂರು ಕಥೆಗಳನ್ನು ಆಯ್ಕೆ ಮಾಡಿ ಪ್ರಥಮ ಬಹುಮಾನವನ್ನಾಗಿ ಒಂದು ಸಾವಿರ ರು. ನೀಡಲಾಗವುದು. ಎರಡನೇ ಬಹುಮಾನ 800 ರು. ಹಾಗೂ ಮೂರನೇ ಬಹುಮಾನ 500 ರು. ಗಳೊಂದಿಗೆ ಪ್ರಶಸ್ತಿ ಪತ್ರ, ಕನ್ನಡ ಶಬ್ಧಕೋಶ ನೀಡಿ ಪುರಸ್ಕರಿಸಲಾಗುವುದು ಎಂದು ಶಶಿಕಲಾ ಅವರು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

## ಹರಿಹರದಲ್ಲಿ ಬಂದ್‌ಗೆ ಬೆಂಬಲ


ರೈತ ಸಂಘಟನೆಗಳು ಕೇಂದ್ರ ಸರ್ಕಾರದ ಜನ ವಿರೋಧಿ ನೀತಿ ಖಂಡಿಸಿ ಕರೆ ನೀಡಿರುವ ಭಾರತ ಬಂದ್‌ಗೆ ಬೆಂಬಲಿಸಲು ಹರಿಹರ ತಾಲ್ಲೂಕಿನ ಕಾಂಗ್ರೆಸ್ ಕಾರ್ಯಕರ್ತರು ಇಂದು ಬೆಳಿಗ್ಗೆ 10.30 ಕ್ಕೆ ಶಾಸಕ ಎಸ್. ರಾಮಪ್ಪನವರ ಕಛೇರಿ ಬಳಿ ಆಗಮಿಸಿ, ರೈತ ಸಂಘಟನೆಗಳ ಮೆರವಣಿಗೆಯಲ್ಲಿ ಭಾಗವಹಿಸುವಂತೆ ಹರಿಹರ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ತಿಳಿಸಿದ್ದಾರೆ.

### ತಾಯಿ....

ತಾಯಿ ಕರುಣಾಮಯಿ ಪ್ರೇಮಮಯಿ, ತಾಯಿಯ ಜೀವನದಿ ಆನಂದ ಬುಗ್ಗೆ
ಬಾಯಿಂದ ಹೇಳದ ಮೋಹದ ಸುಗ್ಗಿ, ತ್ಯಾಗ ಜೀವನದ ದಿವ್ಯ ಮೂರುತಿ
ಆಗಾಗ ಕಳಕಳಿ ತೋರಿದ ಶಕ್ತಿ, ಸಾಗಿ ಪ್ರೇಮದಿ ಸುರಿಸುವ ಕಳಕಳಿ
ಅಗಾಧ ಮಮತೆಯ ಭವ್ಯ ಕೀರುತಿ, ನಾಟಕೀಯತೆ ಅರಿಯದ ಕರುಳು
ಸಾಟಿ ಇಲ್ಲದ ಪ್ರೇಮದ ಸುರುಳಿ, ಕೋಟಿಗಟ್ಟಲೆ ಬೆಲೆಯುಳ್ಳ ಹರಳು
ನೀಟಾದ ಮೋಹದ ಮುದ್ದಿನ ಕರಳು

- ಕೆ.ಎಂ. ಚಂದ್ರಶೇಖರಯ್ಯ, ನಿವೃತ್ತ ಶಿಕ್ಷಕರು

# ಮಾತು ಕೂಡಿಸಬೇಕೆ ವಿನಃ ಒಡೆಯಬಾರದು : ರಂಭಾಪುರಿ ಶ್ರೀ



ರಂಭಾಪುರಿ ಪೀಠ, ಡಿ.7- ಮಾತಿನಲ್ಲಿ ಅದ್ಭುತ ಶಕ್ತಿಯಿದೆ. ಮಾತು ಒಡೆಯಬಲ್ಲದು, ಒಟ್ಟಿಗೆ ಕೂಡಿಸಲು ಬಲ್ಲದು. ಮನುಷ್ಯನಿಗೆ ಮಾತೆಂಬುದು ಭಗವಂತ ನೀಡಿದ ವರಪ್ರಸಾದ. ಮಾತು ಕೂಡಿಸಬೇಕೆ ವಿನಃ ಒಡೆಯುವ ಕೆಲಸ ಮಾಡಬಾರದೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶ್ರೀ ರಂಭಾಪುರಿ ಪೀಠದಲ್ಲಿ ಕಾರ್ತಿಕ ಸಹಸ್ರ ದೀಪೋತ್ಸವ ಹಾಗೂ ಶ್ರೀ ವೀರಭದ್ರಸ್ವಾಮಿ ರಥೋತ್ಸವದ ಅಂಗವಾಗಿ ಜರುಗಿದ ಧರ್ಮ ಜಾಗೃತಿ ಸಮಾರಂಭದಲ್ಲಿ ಆಶೀರ್ವಚನ ನೀಡುತ್ತಿದ್ದರು.

ಧರ್ಮದ ಮಾರ್ಗದಲ್ಲಿ ಸಂಯಮ, ಶಿಸ್ತು, ಅನುಶಾಸನಗಳಿಗೆ ಬಹಳ ಮಹತ್ವವಿದೆ. ಈ ಮೌಲ್ಯಕ್ಕೆ ಸಂಬಂಧಿಸಿದ ಪ್ರಧಾನ ಸೂತ್ರಗಳು ಹತ್ತು. ಅವುಗಳೇ ಅಹಿಂಸಾದಿ ಧ್ಯಾನ ಪರ್ಯಂತರ ದಶ ಧರ್ಮ ಸೂತ್ರಗಳು. ಸ್ವಸ್ಥ ಸಮಾಜದಲ್ಲಿ ಇವು ಪ್ರಭಾತದಲ್ಲಿ ಸೂರ್ಯ ಕಿರಣದಂತೆ ಹರಡುತ್ತಲೇ ಇರುತ್ತವೆ. ಸಂಸ್ಕಾರವಂತ ಕುಟುಂಬಗಳಲ್ಲಿ ಇಂದಿಗೂ ಧರ್ಮಶ್ರದ್ಧೆ, ದೇವತಾ ಭಕ್ತಿ ಮತ್ತು ದೇಶಾಭಿಮಾನ ಇರುವುದನ್ನು ಕಾಣುತ್ತೇವೆ. ಮಾತು ಮಾಣಿಕ್ಯ, ಮಾತು ಮುತ್ತು, ಮಾತು ಜ್ಯೋತಿರ್ಲಿಂಗ ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಯಾರು ದುರ್ಜನರು ಎಂಬುದು ನಮಗೆ ಮನದಟ್ಟಾಗುತ್ತದೆಯೋ ಅಂಥವರಿಂದ ದೂರ ಸರಿಯುವುದು ಸೂಕ್ತ. ದುರ್ಜನರೊಂದಿಗೆ ಸರಸವೂ ಬೇಡ, ವಿರಸವೂ ಬೇಡ. ಅಂಥವರಿಂದ ದೂರ ಸರಿಯುವುದು ಶ್ರೇಯಸ್ಕರ. ಕತ್ತಲೆಯನ್ನು ಕಳೆಯುವ ಶಕ್ತಿ ದೀಪಕ್ಕೆ ಇರುವಂತೆ, ಅಜ್ಞಾನದ ಕತ್ತಲೆ ಕಳೆಯುವ ಶಕ್ತಿ ಗುರುವಿಗೆ ಇದೆ ಎಂದರು.

ಕಾರ್ತಿಕ ದೀಪೋತ್ಸವ ಸಮಾರಂಭದಲ್ಲಿ ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು, ರಾಜೇಶ್ವರದ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬೊಮ್ಮನಹಳ್ಳಿ ಸಿದ್ಧಲಿಂಗ ದೇವರು, ದಾನಯ್ಯ ದೇವರು, ಬೆಂಗಳೂರಿನ ಗುರುಪಾದಯ್ಯ ಹಿರೇಮಠ ಮತ್ತಿತರರು ಪಾಲ್ಗೊಂಡಿದ್ದರು.

## ಭಾರತ್ ಬಂದ್‌ಗೆ ಕನ್ನಡಪರ ಸಂಘಟನೆಗಳ ಬೆಂಬಲ

ದಾವಣಗೆರೆ, ಡಿ.7- ಇಲ್ಲಿನ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಸಭೆ ಕರೆದು, ರೈತರು ಕರೆದಿರುವ ನಾಳೆಯ ಭಾರತ್ ಬಂದ್‌ಗೆ ಬೆಂಬಲಿಸಿ ಒಮ್ಮತದಿಂದ ತೀರ್ಮಾನಿಸಲಾಗಿದೆ ಎಂದು ಕಾರ್ಯಾಧ್ಯಕ್ಷ ಅವಿನಾಶ್ (ಅಭಿ) ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ಕೆ.ಜಿ. ಯಲ್ಲಪ್ಪ, ಅಧ್ಯಕ್ಷ ಎನ್.ಹೆಚ್. ಹಾಲೇಶ್, ಮುಖಂಡ ಐಗೂರು ಸುರೇಶ್, ಉಪಾಧ್ಯಕ್ಷರಾದ ಎಸ್. ರಾಜು, ನಾಗೇಂದ್ರ ಬಂಡೀಕರ್, ಮುಖಂಡರಾದ ಡಾ. ಬಿ. ವಾಸುದೇವ್, ಸುಧಾಕರ್, ಪ್ರಧಾನ ಕಾರ್ಯದರ್ಶಿ ಕೆ.ಎನ್. ವೆಂಕಟೇಶ್, ಹೂವಿನಮಡು ಪ್ರವೀಣ್, ರಾಜು ಎಸ್.ಎಂ., ದೇವೇಂದ್ರಪ್ಪ ಆರ್. ಹಾಗೂ ಸದಸ್ಯರಾದ ಮಂಜು ಮಿಂಚು ಆವರಗೆರೆ, ಭೋಜರಾಜು ಮತ್ತಿತರರು ಭಾಗವಹಿಸಿದ್ದರು.

## ಬಿ.ಎಂ. ಹನೀಫ್ ಅವರ 'ಜಿನ್ನಾ ಕೋಮುವಾದಿಯೇ' ಪುಸ್ತಕ ಬಿಡುಗಡೆ

ದಾವಣಗೆರೆ, ಡಿ.7- ಹಿರಿಯ ಪತ್ರಕರ್ತ ಬಿ.ಎಂ. ಹನೀಫ್ ಅವರ 'ಜಿನ್ನಾ ಕೋಮುವಾದಿಯೇ' ಪುಸ್ತಕವನ್ನು ನಗರದ ವರದಿಗಾರರ ಕೂಟದಲ್ಲಿ ಇಂದು ಬಿಡುಗಡೆ ಮಾಡಲಾಯಿತು.

ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ಈ ಪುಸ್ತಕದಲ್ಲಿ ಇವತ್ತಿನ ರಾಜಕಾರಣಕ್ಕೆ ಪಾಠವಾಗುವ ಹಲವು ಸಂಗತಿಗಳಿವೆ. ಜಿನ್ನಾ ಭಾರತವನ್ನು ವಿಭಜಿಸಿದರು ಎಂಬ ವಾದ ಇದೆ. ಆವೊತ್ತಿನ ಚರಿತ್ರೆಯನ್ನು ಓದಿದರೆ ಅನೇಕರು ವಿಭಜನೆಗೆ ಕಾರಣ ಎಂಬ ಸಂಗತಿ ಅರಿವಿಗೆ ಬರುತ್ತದೆ. ಲೋಹಿಯಾ ಅವರು ಭಾರತ ವಿಭಜನೆಗೆ ಎಂಟು ಕಾರಣಗಳ ಪಟ್ಟಿ ಮಾಡಿದ್ದು, ಅದರಲ್ಲಿ ಜಿನ್ನಾ ಅವರ ಪಾತ್ರ ಕಾಣಿಸಿಲ್ಲ ಎಂದು ತಿಳಿಸಿದರು.

ಜಿನ್ನಾ - ಸಾವರ್ಕರ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜಿನ್ನಾ ಪಾಕಿಸ್ತಾನದ ಪರ ವಹಿಸಿದರೆ, ಸಾವರ್ಕರ್ ಹಿಂದುಸ್ಥಾನ ಪ್ರತಿಪಾದನೆ ಮಾಡಿದರು. ಜಿನ್ನಾ ಮುಸ್ಲಿಂರಿಗೆ ಮತದಾನದ ಹಕ್ಕನ್ನು ಪ್ರತಿಪಾದಿಸಿದರೆ, ಸಾರ್ವಕರ್ ಇದನ್ನು ವಿರೋಧಿಸಿದ್ದರು. ಈ ಕಾರಣಕ್ಕೂ ದೇಶ ವಿಭಜನೆ ಆಯಿತು ಎಂದು ಹಲವರು ವಿಶ್ಲೇಷಣೆ ಮಾಡುತ್ತಾರೆ. ಇವೆಲ್ಲವಕ್ಕೂ ಉತ್ತರವನ್ನು ಈ ಪುಸ್ತಕದಲ್ಲಿ ಕಂಡುಕೊಳ್ಳಲು ಸಾಧ್ಯವಾಗಿದೆ ಎಂದರು.

ಕೃತಿಕಾರ ಬಿ.ಎಂ. ಹನೀಫ್ ಮಾತನಾಡಿ, ಇವತ್ತಿನ ರಾಜಕಾರಣಿಗಳು ಅವರ ಮೂಗಿನ ನೇರಕ್ಕೆ ತಕ್ಕಂತೆ ಇತಿಹಾಸವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. ಅಡ್ವಾನಿ ಅವರು ಜಿನ್ನಾ ಅವರನ್ನು ನಿಜವಾದ ಸೆಕ್ಯುಲರ್ ಅಂತಹ ಕರೆದರೆ, ಇನ್ನೂ ಕೆಲವರು ಕೋಮುವಾದಿ ಎಂದು ಜರಿಯುತ್ತಾರೆ. ಜಿನ್ನಾ ಸೆಕ್ಯುಲರ್ ಹೇಗೆ ಆಗಿದ್ದರು. ಜಿನ್ನಾ ಕೋಮುವಾದಿ ಏಕೆ ಆಗಿದ್ದರು ಎಂದು ಈ ಪುಸ್ತಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರುಗಳಾದ ಎಂ.ಟಿ. ಸುಭಾಶ್ಚಂದ್ರ, ಇಬ್ರಾಹಿಂ, ಕಡತಿ ತಿಪ್ಪೇಶ್, ಸಾಹಿತಿ ಜೆ. ಕಲೀಂ ಪಾಷಾ ಸೇರಿದಂತೆ ಇತರರು ಇದ್ದರು.

## ಮಲೇಬೆನ್ನೂರು ಹೋಬಳಿಯಲ್ಲಿ ಇಂದು ವಿದ್ಯುತ್ ಇಲ್ಲ

ಮಲೇಬೆನ್ನೂರು, ನಂದಿಗುಡಿ, ಭಾನುವಳ್ಳಿ, ದೇವರಬೆಳಕೆರೆ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ದುರಸ್ತಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಇಂದು ಬೆಳಿಗ್ಗೆ 11ರಿಂದ ಸಂಜೆ 5.30 ರವರೆಗೆ ಮಲೇಬೆನ್ನೂರು ಸೇರಿದಂತೆ ಹೋಬಳಿ ವ್ಯಾಪ್ತಿಯ ಹಳ್ಳಿಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

## ರಾಣೇಬೆನ್ನೂರಿನಲ್ಲಿ ಇಂದು ಕಾರ್ತಿಕೋತ್ಸವ

ಬೀರೇಶ್ವರ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಕಾರ್ತಿಕೋತ್ಸವ ಇಂದು ನಡೆಯಲಿದೆ. ಬೆಳಿಗ್ಗೆ ಗುಗ್ಗಳವು ಪುರವಂತರ ಒಡಪುಗಳೊಂದಿಗೆ ಸಂಚರಿಸಿ ದೇವಸ್ಥಾನಕ್ಕೆ ಮರಳಲಿದೆ. ನಂತರ ಅನ್ನ ಸಂತರ್ಪಣೆ, ಸಂಜೆ ಕಾರ್ತಿಕೋತ್ಸವ ಜರುಗಲಿದೆ.

## ಎಸ್ಟಿ ಹೋರಾಟ ಪಾದಯಾತ್ರೆ ಹರಿಹರದಲ್ಲಿ ಇಂದು ಸಭೆ

ಎಸ್ಟಿ ಹೋರಾಟದ ಪಾದಯಾತ್ರೆ ರೂಪುರೇಷೆಗಳ ಪ್ರಯುಕ್ತ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ ಎಸ್. ಎಸ್. ಕೆ. ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಇಂದು ಮಧ್ಯಾಹ್ನ 3 ಕ್ಕೆ ಕರೆಯಲಾಗಿದೆ. ಈ ಸಭೆಗೆ ಶಾಸಕ ಎಸ್. ರಾಮಪ್ಪ ಸೇರಿದಂತೆ ಸಮಾಜದ ಮುಖಂಡರು ಭಾಗವಹಿಸಲಿದ್ದಾರೆ ಎಂದು ಹರಿಹರ ತಾಲ್ಲೂಕು ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಕೆ. ಜಡಿಯಪ್ಪ, ಗ್ರಾಮಾಂತರ ಘಟಕದ ಮುಖಂಡ ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

### ಕಾರ್ತಿಕ ದೀಪವನು ಹಚ್ಚೋಣ ಬನ್ನಿ

ಕಾರ್ತಿಕ ದೀಪವನು ಹಚ್ಚೋಣ ಬನ್ನಿ
ಕಾರ್ತಿಕೇಯನ ಪಿತಗೆ ನಮಿಸೋಣ ಬನ್ನಿ

ಶಿವ ಶಿವ ಶಿವ ಎಂದು ಹರನ ನೆನೆಯೋಣ
ಭವ ಭಯವ ಕಳೆಯೆಂದು ಪಾದಕೆರಗೋಣ
ಕವಿದ ಅಜ್ಞಾನ ಕಳೆ ಎಂದು ಬೇಡೋಣ
ನವ ಉಲ್ಲಾಸವನು ನೀಡು ಎನ್ನೋಣ

ಕಾರ್ತಿಕ ಮಾಸದಲಿ ದೀಪ ಹಚ್ಚುತ್ತ
ಸಾತ್ವಿಕ ಶಕ್ತಿಯಲಿ ತುಂಬಿ ಹೊಳೆಯುತ್ತ
ಕರ್ತವ್ಯ ಪರರಾಗಿ ಭಕ್ತಿ ಮಾಡುತ್ತ
ಉತ್ತಮನ ಅಂಘ್ರಿಗಳ ನಂಬಿ ನಡೆಯುತ್ತ

ಮುಸ್ಸಂಜೆ ಕಾಲದಲಿ ದೀಪದ ಬೆಳಕು
ನಿಸ್ಸೀಮ ದಾರಿಯನು ತೋರುವ ಬೆಳಕು
ಹುಸಿಯ ಕತ್ತಲ ಕಳೆವ ಸತ್ಯದ ಬೆಳಕು
ಹಸಿದ ಅಜ್ಞಾನಿಗೆ ಜ್ಞಾನದ ಬೆಳಕು

ಮನದಲ್ಲಿ ಹೊಳೆಯಲಿ ಆತ್ಮದ ಬೆಳಕು
ಅನಲಾಕ್ಷ ಪಾಲಿಸುವ ಅರಿವಿನ ಬೆಳಕು
ಮನೋನಿಯಾಮಕನ ಕರುಣೆಯ ಬೆಳಕು
ಅನುಕ್ಷಣವು ಸಿರಿಹರಿಗೆ ಪ್ರಿಯವಾದ ಬೆಳಕು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

### ರೈತರು

ದೇಶದ ಉಸಿರು ಯಾರು
ಅವರೇ ನಮ್ಮ ರೈತರು
ಅವರಿಗೆ ಬೇಕು ಚೆನ್ನಾದ ಮಳೆ
ನಮಗೂ ಸಿಗುತ್ತೆ ಒಳ್ಳೆಯ ಬೆಳೆ

ರೈತರ ಕಷ್ಟ ಅಗಾಧ
ಮಳೆಬಿಸಿಲಿನಲ್ಲಿ ದೇಹ ಉರಿದು
ಅವರ ಕೈ ಕೆಸರಾದರೆ
ನಮ್ಮ ಬಾಯಿ ತುಂಬಾ ಮೊಸರೆ

ಹೊಲಗಳಲ್ಲಿ ಹಸಿರು ಹಂದರವಿರೆ
ಎಲ್ಲರ ಜೀವನ ಸುಂದರ ತಾವರೆ
ರೈತರಿಗೆ ಸಿಕ್ಕರೆ ಪುರಸ್ಕಾರ
ನಮ್ಮ ಬದುಕು ಸಂತಸದ ಆಗರ

ರೈತರಿಗೆ ಕಷ್ಟಗಳು ಹಲವಾರು
ಕಷ್ಟಜೀವಿಗಳು ಅವರ ಬಿಟ್ಟರೆ ಇನ್ನಾರು
ಅವರ ಕಷ್ಟಕ್ಕೆ ತಕ್ಕ ಪ್ರತಿಫಲ
ಸಿಗಬೇಕು ಅವರಿಗೆ ಪ್ರತಿಸಲ

ರೈತರು ತಮ್ಮ ಕೆಲಸ ನಿಲ್ಲಿಸಿದರೆ
ಹಸಿವಿನಿಂದ ಎಲ್ಲರ ಜೀವನ ಹೊರೆ
ಅವರು ನೀಡುವರು ನಮಗೆ ಅಮೃತ
ರೈತರಿರಲಿ ಯಾವಾಗಲು ನಗುತ

- ಕೋಮಲ ವಸಂತ ಕುಮಾರ್,
ದಾವಣಗೆರೆ.

# ಪಿಂಜಾರ ಅಭಿವೃದ್ಧಿ ನಿಗಮ ರಚಿಸಲು ಆಗ್ರಹ

ದಾವಣಗೆರೆ, ಡಿ.7- ಪಿಂಜಾರ, ನದಾಫ್ ಸಮುದಾಯಗಳ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ಪಿಂಜಾರ ಅಭಿವೃದ್ಧಿ ನಿಗಮ ರಚಿಸಬೇಕೆಂದು ಕರ್ನಾಟಕ ಪಿಂಜಾರ್, ನದಾಫ್, ಮನ್ಸೂರಿ ಸಂಘಗಳ ಮಹಾಮಂಡಳದ ರಾಜ್ಯಾಧ್ಯಕ್ಷ ಅಬ್ದುಲ್ ರಝಾಕ್ ನದಾಫ್ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಅಂದಾಜು 30 ಲಕ್ಷ ಜನಸಂಖ್ಯೆ ಹೊಂದಿರುವ ಮುಸ್ಲಿಂ ಸಮುದಾಯದಲ್ಲಿ ಶೇ.50 ರಷ್ಟು ಪಿಂಜಾರ, ನದಾಫ್ ವರ್ಗಕ್ಕೆ ಸೇರಿದವರಿದ್ದಾರೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿರುವ ನಮ್ಮ ಸಮುದಾಯದವರ ಏಳಿಗೆಗಾಗಿ ಪಿಂಜಾರ ಅಭಿವೃದ್ಧಿ ನಿಗಮ ರಚಿಸಬೇಕೆಂದು ಒತ್ತಾಯಿಸಿದ ಹಿನ್ನೆಲೆಯಲ್ಲಿ ಫೆಬ್ರವರಿಯಲ್ಲಿ ಬಜೆಟ್ ಪೂರ್ವಭಾವಿ ಸಭೆಗೆ ಮುಖ್ಯಮಂತ್ರಿ ಯಡಿಯೂರಪ್ಪ ನಮ್ಮನ್ನು ಆಹ್ವಾನಿಸಿ ನಮ್ಮ ಅಹವಾಲು ಸ್ವೀಕರಿಸಿ ನಿಗಮ ರಚಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಈಗ ಎಂಟು ತಿಂಗಳಾದರೂ ನಮ್ಮ ಬೇಡಿಕೆ ಈಡೇರಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

2009ರಲ್ಲಿ ಸಿ.ಎಸ್. ದ್ವಾರಕನಾಥ್ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗವು ನದಾಫ್, ಪಿಂಜಾರ ಸಮುದಾಯದ ಸ್ಥಿತಿಗತಿ ಅಧ್ಯಯನ ನಡೆಸಿ, ಅಭಿವೃದ್ಧಿ ನಿಗಮ ರಚಿಸಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆದರೆ, ಇಲ್ಲಿವರೆಗೂ ಆಡಳಿತ ನಡೆಸಿರುವ ಯಾವುದೇ ಸರ್ಕಾರಗಳು ವರದಿ ಶಿಫಾರಸ್ಸು ಅನುಷ್ಠಾನ ಗೊಳಿಸಿಲ್ಲ ಎಂದು ಆಪಾದಿಸಿದರು.

ಗಾದೆ, ದಿಂಬು, ಹಾಸಿಗೆ ಉತ್ಪಾದನೆಯು ನದಾಫ್, ಪಿಂಜಾರರ ಕುಲ ಕಸುಬು ಆಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕುರ್ಲಾನ್, ಸ್ಲೀಪ್ ವೆಲ್ ಸೇರಿದಂತೆ ಇತರೆ ಬೃಹತ್ ಕಂಪನಿಗಳು ಇವುಗಳ ಉತ್ಪಾದನೆಯಲ್ಲಿ ತೊಡಗಿರುವುದರಿಂದ ನಮ್ಮ ಕುಲ ಕಸುಬು ನಶಿಸಿ ಹೋಗುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ನಮ್ಮ ಸಮುದಾಯದ ಅಭಿ ವೃದ್ಧಿಗಾಗಿ ಪಿಂಜಾರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂದು ಆಗ್ರಹಿಸಿದರು.

ಎಲ್ಲಾ ತಾಲ್ಲೂಕುಗಳಲ್ಲೂ ನದಾಫ್, ಪಿಂಜಾರ ಸಮುದಾಯದವರಿಗೆ ಪ್ರವರ್ಗ-1 ರ ಜಾತಿ ಪ್ರಮಾಣ ಪತ್ರ ನೀಡುವಂತೆ ತಹಶೀಲ್ದಾರ್‌ಗಳಿಗೆ ನಿರ್ದೇಶನ ನೀಡಬೇಕು. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಸಮಾಜದ ವಿದ್ಯಾರ್ಥಿನಿಯರಿಗಾಗಿ ವಸತಿ ನಿಲಯ ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಮಂಡಳದ ಮಧ್ಯ ಕರ್ನಾಟಕದ ಅಧ್ಯಕ್ಷ ಎಂ.ರಾಜಸಾಬ್, ಶಫಿವುಲ್ಲಾ, ಮುಮ್ತಾಜ್ ಬೇಗಂ, ಮುದ್ದಾಪುರ ರೆಹಮಾನ್, ನೌಷಿನ್ ತಾಜ್ ಮತ್ತಿತರರು ಹಾಜರಿದ್ದರು.

### ದಿನದ ಚುಟುಕು

ಹೆಸರಿನ ಹಸಿವು ಉಸಿರಿರುವವರೆಗೆ
ನಾನು ನಾನೆಂಬ 'ಅಹಂ'
ಇರುವವರಿಗೆ ನ್ಯಾಯ, ನೀತಿ,
ಸತ್ಯ, ಧರ್ಮ ಕಾಲಡಿಗೆ
ಇರುವವನಲ್ಲವೇ ದೇವ ತೀರ್ಪಿಗೆ.!

- ವೀಕೆಎಂ

ನೋಂದಣಿ ಸಂಖ್ಯೆ : ಡಿಆರ್/ಡಿವಿಜಿ/ಆರ್.ಎಸ್.ಆರ್/25770/2000 ದಿನಾಂಕ : 17.06.2000

**ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ**

1ನೇ ಮಹಡಿ "ಶಿವಗೌರಿ" ಶ್ರೀ ಭೂತಪ್ಪನ ದೇವಸ್ಥಾನದ ಪಕ್ಕ, ರಿಂಗ್ ರಸ್ತೆ, ಶಾಂತಿನಗರ ದಾವಣಗೆರೆ-6 ಫೋ : 296797

**2019-20 ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸ್**

ವಿಜಯನಗರ ಕ್ರೆಡಿಟ್ ಕೋ-ಆಪ್ ಸೊಸೈಟಿ ನಿ., ದಾವಣಗೆರೆ. ಇದರ 2019-20ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು **ದಿನಾಂಕ 24.12.2020ನೇ ಗುರುವಾರ ಬೆಳಿಗ್ಗೆ 11.30ಕ್ಕೆ ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ, "ಶಿವಾಚಾರ್ಯ ನಿಕೇತನ" ಎಂ.ಸಿ.ಸಿ "ಬಿ" ಬ್ಲಾಕ್, ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪ ಹಿಂಭಾಗ** ದಾವಣಗೆರೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಜೆ. ಚಲುವಪ್ಪರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

**ಸಭೆಯ ಕಾರ್ಯಸೂಚಿ**

1. ಪ್ರಾರ್ಥನೆ., 2. ಸ್ವಾಗತ., 3. ವಾರ್ಷಿಕ ಸಾಮಾನ್ಯಸಭೆಯ ನೋಟೀಸ್ ಓದಿ ದಾಖಲು ಮಾಡುವುದು. 4. ದಿನಾಂಕ 21.09.2019 ರಂದು ನಡೆದ ಮಹಾಸಭೆಯ ನಡವಳಿಕೆಗಳನ್ನು ಓದಿ ಅಂಗೀಕರಿಸುವುದು. 5. 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಹಾಗೂ ಅನುಮೋದಿಸುವುದು. 6. 2019-20ನೇ ಸಾಲಿನ ಆಡಿಟ್ ಆದ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಯನ್ನು ಪರಿಶೀಲಿಸುವುದು ಹಾಗೂ ಲೆಕ್ಕ ಪರಿಶೋಧಕರ ವರದಿ ಪರಿಶೀಲಿಸಿ ಅನುಮೋದಿಸುವುದು ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿನ ದೋಷಗಳಿಗೆ ಸಲ್ಲಿಸಿದ ಅನುಪಾಲನಾ ವರದಿಯನ್ನು ಪರಿಶೀಲಿಸುವುದು. 7. 2019-20ನೇ ಸಾಲಿನ ಲಾಭ ವಿಲೇವಾರಿ ಮಾಡುವುದು. 8. 2019-20ನೇ ಸಾಲಿನ ಆಯ-ವ್ಯಯಕ್ಕಿಂತ ಹೆಚ್ಚುವರಿ ಆದ ಖರ್ಚನ್ನು ಒಪ್ಪುವುದು ಮತ್ತು 2020-21ನೇ ಸಾಲಿನ ಮತ್ತು ಮುಂದಿನ ವಾರ್ಷಿಕ ಮಹಾಸಭೆಯ ವರೆಗೆ ವಾರ್ಷಿಕ ಆಯ-ವ್ಯಯ ಪತ್ರವನ್ನು ಮಂಜೂರು ಮಾಡುವುದು. 9. 2020-21ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು., 10. ಪ್ರತಿಭಾ ಪುರಸ್ಕಾರ., 11. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು., 12. ಅಧ್ಯಕ್ಷರ ಭಾಷಣ., 13. ವಂದನಾರ್ಪಣೆ.

ಸ್ಥಳ: ದಾವಣಗೆರೆ
ದಿನಾಂಕ : 27.11.2020

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
**(ದಯಾನಂದ ದೊಡ್ಡಮನಿ)**
ಕಾರ್ಯದರ್ಶಿ

ಕೋವಿಡ್-19 ಇರುವುದರಿಂದ ಭೋಜನಾ ವ್ಯವಸ್ಥೆ ಏರ್ಪಡಿಸಿರುವುದಿಲ್ಲ, ಸದಸ್ಯರು ಸಹಕಾರಿಸಬೇಕಾಗಿ ವಿನಂತಿ.



## ಪಟ್ಟಾಭಿರಾಮ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ

ಹರಿಹರ, ಡಿ.7 - ತಾಲ್ಲೂಕಿನ ನೆಹರು ನಗರದ ಪಟ್ಟಾಭಿ ರಾಮ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಲಕ್ಷ ದೀಪೋತ್ಸವ ಪೂಜಾ ಕಾರ್ಯಕ್ರಮವನ್ನು ನಡೆಸಲಾಯಿತು. ಮೇಲುಸ್ತುವಾರಿಯನ್ನು ಪಿ. ವನಜಾಕ್ಷಿ, ಪಿ.ವಿಜಯಕುಮಾರಿ, ಶಿವಕುಮಾರಿ, ಜಾನ್ಸಿ ರಾಣಿ, ವೈ. ವನಜಾಕ್ಷಿ, ಲಾವಣ್ಯಶ್ರೀ, ವಹಿಸಿಕೊಂಡಿದ್ದರು. ಕೊಳ್ಳಿ ಶ್ರೀದೇವಿ, ಪಾವನಿ, ಕೀರ್ತಿ ಉದಯಶ್ರೀ, ರತ್ನ, ನಾಗಲಕ್ಷ್ಮಿ, ರಾಧಿಕ ಹಾಗೂ ಗ್ರಾಮದ ಮಹಿಳೆಯರು, ಮಕ್ಕಳು ದೀಪೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಸಮಾಜದ ಹಿತ ಕಾಯುವ ವಕೀಲರ ವೃತ್ತಿ ಕಲ್ಪವೃಕ್ಷವಿದ್ದಂತೆ

### ಹರಪನಹಳ್ಳಿಯಲ್ಲಿ ನಡೆದ ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಉಂಡಿ ಮಂಜುಳಾ ಶಿವಪ್ಪ ಬಣ್ಣನೆ



ಹರಪನಹಳ್ಳಿ, ಡಿ.7- ದೇಶದ ಗಡಿಯನ್ನು ಸೈನಿಕರು ಕಾಯುವಂತೆ ಸಮಾಜದ ಹಿತವನ್ನು ಕಾಯುತ್ತಿರುವ ವಕೀಲರ ವೃತ್ತಿ ಕಲ್ಪವೃಕ್ಷವಿದ್ದಂತೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಮಂಜುಳಾ ಶಿವಪ್ಪ ಉಂಡಿ ಬಣ್ಣಿಸಿದ್ದಾರೆ.

ಪಟ್ಟಣದ ವಕೀಲರ ಸಂಘದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ವಕೀಲ ವೃತ್ತಿಯಲ್ಲಿ ಮಾತ್ರ ಎಲ್ಲಾ ರೀತಿಯ ಮಾನದಂಡಗಳ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯ. ವೃತ್ತಿ ಘನತೆ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ವಕೀಲರ ಆದ್ಯ ಕರ್ತವ್ಯವಾಗಿದ್ದು, ಯುವ ವಕೀಲರುಗಳಿಗೆ ಪ್ರೋತ್ಸಾಹ ನೀಡಲು ಸರ್ಕಾರ ಮಾಸಿಕ ವೇತನ ಸೇರಿದಂತೆ ಅನೇಕ ಯೋಜನೆಗಳನ್ನು ರೂಪಿಸಿದ್ದು, ಯುವ ವಕೀಲರುಗಳು ಹೆಚ್ಚು ಹೆಚ್ಚು ಅಧ್ಯಯನಶೀಲರಾಗಬೇಕು ಎಂದರು.

ಕಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ. ಶೋಭ ಮಾತನಾಡಿ, ಸಮಾಜದ ಏಳಿಗೆಗಾಗಿ ಶ್ರಮಿಸುವವರಲ್ಲಿ ವಕೀಲರ ಪಾತ್ರ ದೊಡ್ಡದಿದೆ.

ಕಪ್ಪು ಕೋಟ್‌ಗೆ ಹೆಚ್ಚಿನ ಗೌರವವಿದ್ದು, ವಕೀಲರು ವೃತ್ತಿ ಘನತೆ ಕಾಪಡಿಕೊಳ್ಳಿ. ಇತ್ತೀಚಿನ ದಿನಮಾನಗಳಲ್ಲಿ ಸೈಬರ್ ಪ್ರಕರಣಗಳು ಜಾಸ್ತಿಯಾಗುತ್ತಿದ್ದು ವಕೀಲರು ಹೆಚ್ಚು ಅಧ್ಯಯನ ಮಾಡಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ, ಸಹಾಯಕ ಸರ್ಕಾರಿ ಅಭಿಯೋಜಕ ಬಸವರಾಜ ಹಾಗೂ ಹಿರಿಯ ನ್ಯಾಯವಾದಿ ಬಿ. ಕೃಷ್ಣ ಮೂರ್ತಿ ಮಾತನಾಡಿದರು. ವಕೀಲರ ಸಂಘದ ಕಾರ್ಯದರ್ಶಿ ಕೆ. ಬಸವರಾಜ್, ವಕೀಲರುಗಳಾದ ಗಂಗಾಧರ್ ಗುರುಮಠ್, ಚಿಗಟೇರಿ ವೀರಣ್ಣ, ಕೆ. ಜಗದೀಶಗೌಡ. ಕೆ. ಪ್ರಕಾಶ, ವಿ.ಜಿ. ಪ್ರಕಾಶಗೌಡ, ಕೆ. ಉಚ್ಚಂಗೆಪ್ಪ, ಬಂಡ್ರಿ ಗೋಣಿಬಸಪ್ಪ, ಕೆಂಗಳ್ಳಿ ಪ್ರಕಾಶ, ಎಂ. ಮೃತ್ಯುಂಜಯ, ಎಸ್.ಜೆ. ತಿಪ್ಪೇಸ್ವಾಮಿ, ಮುತ್ತಿಗಿ ಮಂಜುನಾಥ, ರೇವಣಸಿದ್ಧಪ್ಪ, ಬೇಲೂರು ಸಿದ್ದೇಶ್, ಡಿ. ಹನುಮಂತಪ್ಪ, ನಂದೀಶ್ ನಾಯ್ಕ, ಒ. ಮುಜಿಬುರ್ ಹಾಗು ಇನ್ನಿತರರಿದ್ದರು.

## 14ರಂದು 1 ರಾಷ್ಟ್ರ, 1 ಚುನಾವಣೆ ಚರ್ಚೆ



ಬೆಂಗಳೂರು, ಡಿ.7 - ಡಿಸೆಂಬರ್ 14 ಮತ್ತು 15ರಂದು ಒಂದು ರಾಷ್ಟ್ರ ಒಂದು ಚುನಾವಣೆ ಬಗ್ಗೆ ಚರ್ಚೆ ನಡೆಯಲಿದೆ. ಕೊರೊನಾ ಹಿನ್ನೆಲೆಯಲ್ಲಿ ಸದಸ್ಯರು ಸ್ವಯಂ ಶಿಸ್ತು ಅಳವಡಿಸಿಕೊಳ್ಳಬೇಕು ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಕೊರೊನಾ ಎರಡನೇ ಅಲೆ ಪ್ರಾರಂಭವಾಗುತ್ತಿದೆ ಎಂದು ತಜ್ಞರು ಸಲಹೆ ನೀಡಿರುವುದು ನಮ್ಮೆಲ್ಲರಿಗೂ ತಿಳಿದಿದೆ. ಎಲ್ಲರೂ ಕಡ್ಡಾಯವಾಗಿ ಮಾಸ್ಕ್, ಸ್ಯಾನಿಟೈಸರ್ ಬಳಸಿ ಅಂತರ ಕಾಯ್ದುಕೊಳ್ಳಬೇಕು. ಅನಾರೋಗ್ಯದ ಲಕ್ಷಣ ವಿದ್ದವರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬಹುದು. ಅಗತ್ಯವಿದ್ದರೆ ಚಿಕಿತ್ಸೆ ಕೊಡಿಸಲಾಗುವುದು ಎಂದರು.

ಕೊರೊನಾ ನಿರ್ಲಕ್ಷಿಸಲಾಗುತ್ತಿದೆ ಎಂಬ ಆರೋಪವಿದೆ. ಸದನ ಕಾರ್ಯ ಕಲಾಪದಲ್ಲಾಗಲೀ, ಸಾರ್ವಜನಿಕ ಜೀವನದಲ್ಲಾಗಲೀ ನಿರ್ಲಕ್ಷಿಸದೆ ಸ್ವಯಂ ಶಿಸ್ತನ್ನು ಪಾಲಿಸೋಣ. ಅದೇ ರೀತಿ ಸದನದಲ್ಲಿ ಕೂಡಾ ಶಿಸ್ತಿನಿಂದ ಕಾರ್ಯಕಲಾಪದಲ್ಲಿ ಪಾಲ್ಗೊಳ್ಳಿ ಗುಂಪು ಗೂಡುವುದು ಬೇಡ ಎಂದು ತಿಳಿಸಿದರು.

ಅಖಿಲ ಭಾರತ ಪೀಠಾಸೀನ ಅಧಿಕಾರಿಗಳ ಸಮಾವೇಶ ನಡೆಯಿತು. ಸಮ್ಮೇಳನದ ಸಮಾರೋಪದಲ್ಲಿ ವರ್ಚುಯಲ್ ಭಾಷಣ ಮಾಡಿದ ಪ್ರಧಾನಿ ಒಂದು ರಾಷ್ಟ್ರ ಒಂದು ಚುನಾವಣೆ ಬಗ್ಗೆ ಚರ್ಚೆಯಾಗಲಿ ಎಂದಿದ್ದರು. ಇದೇ ದಿನಾಂಕ 14 ಮತ್ತು 15ರ ಎರಡೂ ದಿನ ವಿಚಾರದ ಬಗ್ಗೆ ವಿಶೇಷ ಚರ್ಚೆ ನಡೆಸಲಾಗುವುದು ಎಂದರು. ಈ ಕುರಿತಂತೆ ಮುಖ್ಯಮಂತ್ರಿ ವಿರೋಧ ಪಕ್ಷದ ನಾಯಕರೊಂದಿಗೂ ಚರ್ಚೆ ನಡೆಸಲಾಗಿದೆ. ನಾಳೆ ನಡೆಯುವ ಕಾರ್ಯ ಕಲಾಪಗಳ ಸಲಹಾ ಸಮಿತಿ ಸಭೆಯಲ್ಲೂ ಚರ್ಚೆ ಮಾಡಬಹುದು.

ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಪ್ರತಿಮೆ ಗುಜರಾತ್‌ನಲ್ಲಿ ನಿರ್ಮಾಣವಾಗಿದೆ. ಅದು ಜಗತ್ತಿನಲ್ಲೇ ಅತ್ಯಂತ ಎತ್ತರವಾದ ಭವ್ಯ ಮೂರ್ತಿ, ವಿವಿಧ ಸಮಿತಿಗಳು ಪ್ರವಾಸ ಕೈಗೊಳ್ಳುವಾಗ ಅಲ್ಲಿಗೆ ಭೇಟಿ ನೀಡುವುದು ಸೂಕ್ತ. ಕೌಟುಂಬಿಕ ಪ್ರವಾಸವನ್ನೂ ಕೈಗೊಳ್ಳಬಹುದು ಎಂದರು.

## ಗ್ರಾ.ಪಂ. ಚುನಾವಣೆ: ಮೊದಲ ದಿನವೇ 51 ನಾಮಪತ್ರ ಸಲ್ಲಿಕೆ



ದಾವಣಗೆರೆ, ಡಿ.7- ಇದೇ 22 ರಂದು ನಡೆಯುವ ಗ್ರಾಮ ಪಂಚಾಯ್ತಿ ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸುವ ಪ್ರಥಮ ದಿನವಾದ ಸೋಮವಾರ ಮೂರು ತಾಲ್ಲೂಕುಗಳಿಂದ 51 ನಾಮ ಪತ್ರಗಳು ಸಲ್ಲಿಕೆಯಾಗಿವೆ.

ಜಗಳೂರು ತಾಲ್ಲೂಕಿನಲ್ಲಿ 16, ಹೊನ್ನಾಳಿ 10 ಹಾಗೂ ದಾವಣಗೆರೆ ತಾಲ್ಲೂಕಿನಲ್ಲಿ 25 ನಾಮಪತ್ರಗಳು ಸಲ್ಲಿಕೆಯಾಗಿವೆ.

**ಅಧಿಸೂಚನೆ:** ದಾವಣಗೆರೆ, ಜಗಳೂರು ಮತ್ತು ಹೊನ್ನಾಳಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಅವಧಿ ಪೂರ್ಣಗೊಂಡಿರುವ ಎಲ್ಲಾ ಗ್ರಾ.ಪಂ ಗಳಿಗೆ ಚುನಾವಣೆ ನಡೆಯಲಿದೆ. ಡಿ.11 ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನ. ಡಿ.12 ನಾಮಪತ್ರಗಳನ್ನು ಪರಿಶೀಲಿಸುವ ದಿನ ವಾಗಿದೆ. ಡಿ.14 ಉಮೇದುವಾರಿಕೆಗಳನ್ನು ಹಿಂತೆಗೆದು ಕೊಳ್ಳಲು ಕೊನೆಯ ದಿನವಾಗಿದೆ. ಡಿ.22ರಂದು ಮತದಾನವು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆವರೆಗೆ ನಡೆಯಲಿದೆ.

**ಅವಧಿ ಪೂರ್ಣಗೊಳ್ಳದ ಗ್ರಾ.ಪಂ ವಿವರ:** ದಾವಣಗೆರೆ ತಾಲ್ಲೂಕಿನ ಬೇತೂರು, ಕನಗೊಂಡನಹಳ್ಳಿ, ಕುಕ್ಕುವಾಡ ಮತ್ತು ಮಾಯಕೊಂಡ. ಹೊನ್ನಾಳಿ ತಾಲ್ಲೂಕಿನ ಹೆಚ್. ಕಡದಕಟ್ಟೆ ಈ ಗ್ರಾ.ಪಂ ಗಳು ಅವಧಿ ಪೂರ್ಣಗೊಳ್ಳದ ಕಾರಣ ಚುನಾವಣಾ ಪ್ರಕ್ರಿಯೆಯಿಂದ ಕೈಬಿಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

## ಮುಂದಿನ ಅಧಿವೇಶನದಲ್ಲಿ ಲವ್ ಜಿಹಾದ್ ತಡೆ ಮಸೂದೆ : ಮುಖ್ಯಮಂತ್ರಿ

ಬೆಂಗಳೂರು, ಡಿ. 7 - ಪ್ರಸಕ್ತ ಅಧಿವೇಶನದಲ್ಲಿ ಗೋವಧೆ ತಡೆ ಮಸೂದೆ ಮಂಡಿಸಲಾಗುವುದು ಹಾಗೂ ಲವ್ ಜಿಹಾದ್ ವಿರುದ್ಧದ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಗೋವಧೆ ತಡೆ ಮಸೂದೆಯನ್ನು ಹಿಂದಿನ ಅವಧಿಯಲ್ಲೇ ನಾವು ಮಂಡಿಸಿದ್ದೆವು. ಆದರೆ, ಒಪ್ಪಿಗೆ ಪಡೆಯಲು ಸಾಧ್ಯವಾಗಿರಲಿಲ್ಲ. ಮತ್ತೆ ಮಸೂದೆ ಮಂಡಿಸುವಂತೆ ನಾನು ಕಾನೂನು ಸಚಿವರಿಗೆ ತಿಳಿಸಿದ್ದೇನೆ. ನಾಳೆ ಇಲ್ಲವೇ ನಾಡಿದ್ದು ಮಸೂದೆಯನ್ನು ಮಂಡಿಸಿ ಒಪ್ಪಿಗೆ ಪಡೆಯಲಾಗುವುದು ಎಂದವರು ಹೇಳಿದ್ದಾರೆ. ಸಾಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಮುಂದಿನ ಅಧಿವೇಶನದಲ್ಲಿ ಲವ್ ಜಿಹಾದ್ ತಡೆ ಮಸೂದೆ ಕುರಿತು ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ.






**ಅಂತರದ ಅಂಚಿನ ಮಾತು!**

ಕೊರೊನಾ ಹಿನ್ನೆಲೆಯಲ್ಲಿ ವಿಧಾನಸಭಾ ಸದಸ್ಯರ ಕುರ್ಚಿಗಳ ನಡುವೆ ಪಾರದರ್ಶಕ ಫಲಕಗಳ ಮೂಲಕ ಅಂತರ ತರಲಾಗಿತ್ತು. ಅದರ ಅಂಚಿನಲ್ಲೇ ಮಾತುಕತೆ ನಡೆಸುತ್ತಿರುವ ಸಚಿವರು - ಶಾಸಕರು.

## ಬಂದ್ : ಕಾರ್ಮಿಕ - ರೈತ ಸಂಘಟನೆಗಳ ಜಾಥಾ




ದಾವಣಗೆರೆ, ಡಿ.7- ನಾಳೆ ಮಂಗಳವಾರದ ಭಾರತ್ ಬಂದ್ ಬೆಂಬಲಿಸಿ ಕಾರ್ಮಿಕ - ರೈತ ಸಂಘಟನೆಗಳು ಮುನ್ನಾ ದಿನವಾದ ಇಂದು ಕಾಲ್ನಡಿಗೆ ಜಾಥಾ ನಡೆಸಿ ಬಂದ್ ಗೆ ಬೆಂಬಲಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಜಯದೇವ ವೃತ್ತದಿಂದ ಹೊರಟ ಕಾಲ್ನಡಿಗೆ ಜಾಥಾವು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು.ಈ ವೇಳೆ ಮೆರವಣಿಗೆ ನಡೆಸಿದ ಕಾರ್ಯಕರ್ತರು, ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ, ಬೀಜ ಗೊಬ್ಬರ ಕಾಯ್ದೆ ಹಾಗೂ ವಿದ್ಯುತ್ ಕಾಯ್ದೆ ಸೇರಿದಂತೆ ರೈತ-ಕಾರ್ಮಿಕ ಕಾಯ್ದೆಗಳ ತಿದ್ದುಪಡಿ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು. ನಂತರ ರೈತ ಸಂಘಟನೆಗಳು ಬೈಕ್ ರ‍್ಯಾಲಿ ನಡೆಸಲು ಮುಂದಾದ ವೇಳೆ ಪೊಲೀಸರು ಅವಕಾಶ ನೀಡಲಿಲ್ಲ. ಬಂದ್‌ಗೆ ಬೆಂಬಲಿಸುವಂತೆ ಕಾರ್ಯಕರ್ತರು ವಿವಿಧ ಸಂಘಟನೆಗಳು ಜನರಲ್ಲಿ ಮನವಿ ಮಾಡಿದವು.

ಮೆರವಣಿಗೆಯಲ್ಲಿ ರೈತ ಸಂಘಟನೆಗಳೊಂದಿಗೆ ಆರ್ ಕೆಎಸ್, ಎಐಟಿಯುಸಿ, ಎಎಪಿ ಸೇರಿದಂತೆ 20ಕ್ಕೂ ಹೆಚ್ಚು ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

## ಭಾರತ್ ಬಂದ್‌ಗೆ ಕಾಂಗ್ರೆಸ್ ಬೆಂಬಲ

ದಾವಣಗೆರೆ, ಡಿ.7- ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ನಾಳೆ ದಿನಾಂಕ 8ರ ಮಂಗಳವಾರ ಭಾರತ್ ಬಂದ್‌ಗೆ ಜಿಲ್ಲಾ ಕಾಂಗ್ರೆಸ್ ಬೆಂಬಲ ವ್ಯಕ್ತಪಡಿಸಿರುವುದಾಗಿ ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ತಿಳಿಸಿದ್ದಾರೆ.

ದೆಹಲಿಯಲ್ಲಿ ಲಕ್ಷಾಂತರ ರೈತರು ಹೋರಾಟ ನಡೆಸುತ್ತಿದ್ದಾರೆ. ಇಲ್ಲೂ ಸಹ ರೈತ, ಕಾರ್ಮಿಕ ಸಂಘಟನೆಗಳು ಬಂದ್‌ಗೆ ಕರೆಕೊಟ್ಟಿವೆ. ಜಿಲ್ಲೆಯಲ್ಲಿ ಬಂದ್‌ಗೆ ಬೆಂಬಲ ನೀಡಲು ಕಾಂಗ್ರೆಸ್ ತೀರ್ಮಾನಿಸಿದೆ. ಮೋದಿ ಸರ್ಕಾರ ಕೃಷಿ ವಲಯವನ್ನು ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ನೀಡಲು ಹುನ್ನಾರ ನಡೆಸಿದೆ. ಈ ಕಾಯ್ದೆಯಿಂದ ಕೃಷಿಯಲ್ಲಿನ ಕನಿಷ್ಠ ಬೆಂಬಲ ಬೆಲೆ ಪದ್ದತಿ ರದ್ದಾಗುತ್ತದೆ ಎಂದು ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪಾಲಿಕೆ ಸದಸ್ಯ ಚಮನ್ ಸಾಬ್ ಮಾತನಾಡಿ, ಕೊರೊನಾದಿಂದ ಮೂರು ತಿಂಗಳು ಮನೆ ಬಿಟ್ಟು ಹೊರಗೆ ಬಾರದ ನಾವುಗಳು ಒಂದು ದಿನ ರೈತರ ಬಂದ್‌ಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯ ಮಂಜುನಾಥ ಗಡಿಗುಡಾಳ್, ಮುಖಂಡ ಗಣೇಶ್ ಹುಲ್ಲುಮನಿ ಪತ್ರಿಕಾಗೋಷ್ಠಿಯಲ್ಲಿದ್ದರು.

## ಬಾಸ್ಕೆಟ್ ಬಾಲ್ ಕ್ಲಬ್‌ಗೆ ಸಮಗ್ರ ಪ್ರಶಸ್ತಿ



ದಾವಣಗೆರೆ, ಡಿ.7 - ಧಾರವಾಡದ ಮಲ್ಲಸಜ್ಜನ ವ್ಯಾಯಾಮ ಶಾಲಾ ಬಾಸ್ಕೆಟ್‌ಬಾಲ್ ಕ್ಲಬ್ ವತಿಯಿಂದ ಮೊನ್ನೆ ಏರ್ಪಡಿಸಿದ್ದ ಬಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್ ಸಮಗ್ರ ಪ್ರಶಸ್ತಿಗೆ ಭಾಜನವಾಗಿದೆ.

14 ಮತ್ತು 16 ವರ್ಷದ ಒಳಗಿನ ಬಾಲಕ, ಬಾಲಕಿಯರ ಬಾಸ್ಕೆಟ್ ಬಾಲ್ ಪಂದ್ಯಾವಳಿಯ 4 ವಿಭಾಗಗಳಲ್ಲಿ ಭಾಗವಹಿಸಿದ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್‌ನ ಕ್ರೀಡಾಪಟುಗಳು 14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪ್ರಥಮ ಸ್ಥಾನ, 16 ವರ್ಷದ ಬಾಲಕರ ವಿಭಾಗದಲ್ಲಿ ದ್ವಿತೀಯ ಸ್ಥಾನ ಮತ್ತು 14 ಮತ್ತು 16 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

ತರಬೇತುದಾರರಾದ ಆರ್. ವೀರೇಶ್, ಆರ್. ದರ್ಶನ್ ಅವರು ಪ್ರಶಸ್ತಿ ಪಡೆದ ಬಾಲಕ-ಬಾಲಕಿಯರನ್ನು ಅಭಿನಂದಿಸಿದ್ದಾರೆ.

## ಶಿಕ್ಷಕಿ ಮಂಜುಳಾ ಅವರಿಗೆ 'ಗುರುಭೂಷಣ' ಪ್ರಶಸ್ತಿ ಪ್ರದಾನ



ದಾವಣಗೆರೆ, ಡಿ.7- ವಿವಿಧ ಕ್ಷೇತ್ರಗಳ ಸಾಧಕರಿಗೆ ಕರ್ನಾಟಕ ರಾಜ್ಯ ಶಿಕ್ಷಕ ಪ್ರತಿಭಾ ಪರಿಷತ್ (ಮೈಸೂರು) ಕೊಡಮಾಡುವ ರಾಜ್ಯ ಮಟ್ಟದ 'ಗುರುಭೂಷಣ' ಪ್ರಶಸ್ತಿಗೆ ಇಲ್ಲಿನ ಯಲ್ಲಮ್ಮ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಸಹ ಶಿಕ್ಷಕಿ ಶ್ರೀಮತಿ ಎಸ್. ಮಂಜುಳಾ ಬಸವನಗೌಡ ಪಾಟೀಲ್ ಭಾಜನರಾಗಿದ್ದಾರೆ.

ಮಂಜುಳಾ ಅವರು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಶ್ಲಾಘನೀಯ ಸೇವೆಯನ್ನು ಪರಿಗಣಿಸಿ, ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಕರ್ನಾಟಕ ರಾಜ್ಯ ಶಿಕ್ಷಕ ಪ್ರತಿಭಾ ಪರಿಷತ್ ವತಿಯಿಂದ ಕಳೆದ ಮೈಸೂರಿನಲ್ಲಿ ನಡೆದ ಸಮಾರಂಭದಲ್ಲಿ ಮಂಜುಳಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಪರಿಷತ್ತಿನ ರಾಜ್ಯಾಧ್ಯಕ್ಷ ಪಿ. ಮಹೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಹಾಂತೇಶ ಚವ್ಹಾಣ್, ರಾಜ್ಯ ಉಪಾಧ್ಯಕ್ಷ ಶಂಕರ ಕ್ವಾಸ್ತಿ, ಚಂದನ ವಾಹಿನಿ ಜೋಶಿ, ಹಾಸ್ಯ ಮಾತುಗಾರ ಪ್ರೊ. ಕೃಷ್ಣೇಗೌಡ ಹಾಗು ಇನ್ನಿತರೆ ಗಣ್ಯರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಸುಟ್ಟು ಕರಕಲಾದ ಸ್ಥಿತಿಯಲ್ಲಿ ಅಪರಿಚಿತ ವ್ಯಕ್ತಿ ಶವ ಪತ್ತೆ

ದಾವಣಗೆರೆ, ಡಿ.7- ಸುಟ್ಟು ಕರಕಲಾದ ಸ್ಥಿತಿಯಲ್ಲಿ ಅನಾಮಧೇಯ ವ್ಯಕ್ತಿಯ ಶವ ತಾಲ್ಲೂಕಿನ ಹುಲಿಕಟ್ಟೆ ಗ್ರಾಮದ ಗೋಮಾಳ ಜಮೀನಿನಲ್ಲಿ ನಿನ್ನೆ ಪತ್ತೆಯಾಗಿದೆ.

ಸುಮಾರು 30 ರಿಂದ 35 ವರ್ಷ ವಯಸ್ಸು ಇರಬಹುದೆಂದು ಪೊಲೀಸರು ಅಂದಾಜಿಸಿದ್ದು, ವ್ಯಕ್ತಿಯ ವಿಳಾಸ ಪತ್ತೆಯಾಗಿಲ್ಲ. ಯಾವುದೋ ದ್ವೇಷದಿಂದ ಈ ವ್ಯಕ್ತಿಯನ್ನು ಕೊಲೆಗೈದು ಹೀಗೆ ಸುಟ್ಟು ಹಾಕಲಾಗಿದೆ ಎನ್ನಲಾಗಿದ್ದು, ಪೊಲೀಸರು ಶವದ ವಾರಸುದಾರರ ಹುಡುಕಾಟದಲ್ಲಿದ್ದಾರೆ.

ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶವದ ಬಲಗೈಯಲ್ಲಿ ಕಡಗ ಮತ್ತು ಆಮೆ ಉಂಗುರ ಇದ್ದು ಈ ಅಪರಿಚಿತ ಶವದ ಬಗ್ಗೆ ಮಾಹಿತಿ ಇದ್ದರೆ ಗ್ರಾಮಾಂತರ ಪೊಲೀಸ್ ವೃತ್ತಾಧಿಕಾರಿ (94808 03232) ಗಳಿಗೆ ಮಾಹಿತಿ ನೀಡಬಹುದು.

## ಕೆಂಗಪ್ಪು ಚುಕ್ಕೆ ಪಾತರಗಿತ್ತಿಯ ಚಿತ್ತಾರ....

ಪಾತರಗಿತ್ತಿಗಳ ವರ್ಣ ಸಂಕರದಲ್ಲಿ ವಿಶೇಷತೆಯಿದೆ. ಪ್ರಾಣಿಗಳಲ್ಲಿ ಅತೀ ಹೆಚ್ಚು ವೈವಿಧ್ಯತೆಯನ್ನು ಹೊಂದಿರುವ ಕೀಟ ಪ್ರಪಂಚದ ಸದಸ್ಯರು ಈ ಪಾತರಗಿತ್ತಿಯರು. ತಮ್ಮ ವರ್ಣ ಸಂಯೋಜನೆಯಲ್ಲಿ ಸಸ್ಯ ಲೋಕದ ಹೂಗಳೊಂದಿಗೆ ಪೈಪೋಟಿಯಿದೆಯೇನೋ ಎನ್ನಿಸುತ್ತದೆ. ಅಂತಹ ಗುಂಪಿನ ಸದಸ್ಯ ಕೆಂಪು-ಕಪ್ಪು ಚುಕ್ಕೆ ಚಿಟ್ಟೆ (Red Pierrot). ತನ್ನಲ್ಲಿರುವ ಮೂರು ಬಣ್ಣಗಳನ್ನೇ ಉಪಯೋಗಿಸಿ ತನ್ನದೇ ವೈಶಿಷ್ಟ್ಯತೆಯನ್ನು ಹೊಂದಿದೆ.

ಈ ಚಿಟ್ಟೆಗಳ ಮೇಲ್ಭಾಗ ಕಪ್ಪು ಮಿಶ್ರಿತ ಕಂದು. ಹಿಂದಿನ ರೆಕ್ಕೆಯ ಎರಡನೇ ಮೂರರಷ್ಟು ಕೆಳಭಾಗ ಕೆಂಪು ಅಥವಾ ಕಿತ್ತಳೆ-ಕೆಂಪು ಬಣ್ಣದಿಂದ ಕೂಡಿದ್ದು ಬಿಳಿ ಚುಕ್ಕೆಗಳಿವೆ. ತುದಿಯಲ್ಲಿ ಸೂಕ್ಷ್ಮವಾದ ಕಂದು ಬಾಲವಿರುವುದು. ದೇಹದ ಕೆಳಗಿನ ಭಾಗವು ಬಿಳಿ ಬಣ್ಣದಿಂದ ಕೂಡಿದ್ದರೂ ಮುಂದಿನ ರೆಕ್ಕೆಗಳ ಅಂಚಿನಲ್ಲಿ ಕಪ್ಪು ಪಟ್ಟಿಯಿದ್ದು, ಬಿಳಿ ಚುಕ್ಕೆಗಳನ್ನು ಹೊಂದಿದೆ. ಹಿಂದಿನ ರೆಕ್ಕೆಯಲ್ಲಿ ಕಿತ್ತಳೆ-ಕೆಂಪು ಅಂಚಿದ್ದು, ಬಿಳಿ ಚುಕ್ಕೆಗಳಿವೆ. ಉಳಿದಂತೆ ಎರಡು ರೆಕ್ಕೆಗಳು ಬಿಳಿ ಬಣ್ಣದಿಂದಿದ್ದು ಕಪ್ಪು ಚುಕ್ಕೆಗಳನ್ನು ಕಾಣಬಹುದು.

ಗಾತ್ರದಲ್ಲಿ ಸಣ್ಣ ಚಿಟ್ಟೆಯಾಗಿದ್ದು, ರೆಕ್ಕೆ ಹರಡಿದಾಗ ಗರಿಷ್ಠ ಮೂರುವರೆ ಸೆಂಟಿಮೀಟರ್ ಇರುತ್ತದೆ. ಸಾಧಾರಣ ಮತ್ತು ನಿಧಾನ ಹಾರಾಟಗಾರ. ಹೆಚ್ಚು ಎತ್ತರಕ್ಕೇರದೆ ನೆಲದ ಹತ್ತಿರ ಮೆಲ್ಲಗೆ ಹಾರಾಡುತ್ತಿರುತ್ತವೆ.

ಇದರ ಕಂಬಳಿ ಹುಳು ಪೇಲವ-ಹಳದಿ ಅಥವಾ ಬಿಳಿ ಬಣ್ಣದ್ದಾಗಿದ್ದು, ಮೈತುಂಬಾ ಸಣ್ಣ ಕೂದಲುಗಳನ್ನು ಹೊಂದಿರುತ್ತದೆ. ತಲೆ ಸಣ್ಣಗಿದ್ದು, ದೇಹದ ಕೆಳಭಾಗದಲ್ಲಿ ನಾಲ್ಕು ಚುಕ್ಕೆಗಳಿರುವ ಉಂಗುರಗಳು ಕಾಣಸಿಗುತ್ತವೆ.



ಕೆಳಭಾಗದಲ್ಲಿ ತೆಳ್ಳನೆಯ ಹಸಿರು ಗೆರೆಯಿರುತ್ತದೆ. ದೇಹದ ಪಾರ್ಶ್ವಗಳಲ್ಲಿ ಒಂಬತ್ತು ಚುಕ್ಕೆಗಳಿರುತ್ತವೆ.

ಕುರುಚಲು ಕಾಡು ಮತ್ತು ನಿತ್ಯ ಹರಿದ್ವರ್ಣ ಕಾಡುಗಳಲ್ಲಿಯೂ ಪ್ರಮುಖವಾಗಿ ಕಾಣಸಿಗುವ ಈ ಚಿಟ್ಟೆಗಳು ಲೈಕಾನಿಡೆ (Lycaenidae) ಕುಟುಂಬಕ್ಕೆ ಸೇರಿವೆ. ಪ್ರಾಣಿಶಾಸ್ತ್ರೀಯವಾಗಿ ಟೆಲಿಕಾಡ ನೈಸೆಯಿಸ್ ನೈಸೆಯಿಸ್ (Talicada nyseus nyseus) ಎಂದು ಕರೆಯಲ್ಪಡುತ್ತವೆ.

ದಕ್ಷಿಣ ಭಾರತದ ರಾಜ್ಯಗಳಲ್ಲದೆ ಒರಿಸ್ಸಾ, ಅಸ್ಸಾಂ ಮತ್ತು ಇತರೆ ಈಶಾನ್ಯ ಭಾರತದ ರಾಜ್ಯಗಳಲ್ಲಿಯೂ ಕಾಣಸಿಗುತ್ತವೆ. ಬೇರೆ ದೇಶಗಳಾದ ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾದೇಶ, ಮಯನ್ಮಾರ್ ನಲ್ಲಿಯೂ ವಾಸಿಸುತ್ತವೆ.

ಮೂರು-ನಾಲ್ಕು ದಿನಗಳ ಜೀವನದಲ್ಲಿ ಬಣ್ಣದ ಚಿತ್ತಾರ ಮೂಡಿಸಿ, ಸಸ್ಯಗಳ ಬೀಜಾಂಕುರಕ್ಕೆ ಸಹಾಯ ಮಾಡಿ, ಕಣ್ಮನ ತಣಿಸಿ ಮರೆಯಾಗುವ ಚಿಟ್ಟೆಗಳ ಜೀವನದ ಸಾರ್ಥಕತೆ ಮಾನವ ಬದುಕಿನ ಪರಿಗೊಂದು ಅರ್ಥ/ಅಪಾರ್ಥ ಕಲ್ಪಿಸುವುದಲ್ಲವೇ?

- ಡಾ. ಎಸ್. ಶಿಶುಪಾಲ,
ಪ್ರಾಧ್ಯಾಪಕರು
ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ.
sskumb@gmail.com

ಹೃದಯಪೂರ್ವಕ ಅಭಿನಂದನೆಗಳು




ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಆಡಳಿತ ಮಂಡಳಿಯ ವಿಶೇಷ ಆಹ್ವಾನಿತರಾಗಿ ನೇಮಕಗೊಂಡಿರುವ

ಶ್ರೀಮತಿ ಉಮಾ ವಾಗೀಶ್ ಎಸ್.

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಎನ್.ಎ. ಮುರುಗೇಶ್
ಅಧ್ಯಕ್ಷರು, ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ದಾವಣಗೆರೆ.

✦ ಶ್ರೀಮತಿ ಅನ್ನಪೂರ್ಣ, ಶ್ರೀ ಪಂಚಾಕ್ಷರಯ್ಯ ಮತ್ತು ಮಕ್ಕಳು, ಹರಿಹರ.
✦ ಶ್ರೀಮತಿ ಸುಮಾ, ಶ್ರೀ ಓಂ ಪ್ರಸಾದ್, ಚಿ॥ ವಾಗೀಶ್ ಪ್ರಸಾದ್, ಚಿ॥ ಗೌರಿ ಪ್ರಸಾದ್, ಹರಿಹರ.
✦ ಶ್ರೀಮತಿ ಲೀಲಾವತಿ, ಶ್ರೀ ಜಯದೇವ ಹಿರೇಮಠ್, ಚಿ॥ ನಿರಂಜನ, ಚಿ॥ ನಂದೀಶ್, ಹುಲಿಗಿ-ಹೊಸಪೇಟೆ.
✦ ಶ್ರೀಮತಿ ಲತಾ, ಶ್ರೀ ವಿಜಯಕುಮಾರ್, ಚಿ॥ ಕಾರ್ತಿಕ್, ಚಿ॥ ನಯನ, ಕುರ್ತುಕೋಟೆ, ಗದಗ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte